# ೬ನೇ ಭಾಗ.

## ವ್ಯಾಪಾರ.

### ೧ನೇ ಪ್ರಕರಣ.

ಮಾರ್ಗಗಳು.

ಮಾರ್ಗಗಳು.— ಬ್ರಿಟಿಶ ಸರಕಾರದ ಅಮಲು ಬರುವ ಪೂರ್ವದಲ್ಲಿ ಈ ಸೀಮೆಯಲ್ಲಿ ಹೊಸ ಮಾರ್ಗಗಳ ಸುದ್ದಿಯೇ ಇದ್ದಿಲ್ಲ. ಆಗಿನ ರಾಜಧಾನಿಯಾದ ಪುಣೆ ಪಟ್ಟಣದ ಸುತ್ತು ಮುತ್ತು ಸಹ ನಿರ್ಮಲವಾದಂಥ ಸವನೆಲದ ಮಾರ್ಗಗಳು ಇದ್ದಿಲ್ಲ. ಮಾರಾಟದ ಸರಕುಗಳನ್ನು ಲಂಬಾಣಿಗಳು ಮುಂತಾದವರು ಯೆತ್ತುಗಳ ಮೇಲೆ ಹೇರಿ ಕೊಂಡು ಊರಿಂದೂರಿಗೆ ವೊಯ್ಯುವರು; ಛಕಡಿಗಳು ನಡಿಯುವಂತೆ ಕಟ್ಟಿಸಿದ ಮಾರ್ಗಗಳ ವರ್ತಮಾನವೇ ಇದ್ದಿಲ್ಲ. ಕುದುರೆ, ಯೆತ್ತು, ಮನುಷ್ಯರು, ಇವರ ತುಳಕಲಿನಿಂದ ತಮಗೆ ತಾವೇ ಬಿದ್ದ ಮಾರ್ಗಗಳಿಂದಲೇ ಯಾವತ್ತು ವ್ಯವಹಾರ ನಡಿಯುತ್ತಿತ್ತು. ಈ ಮಾರ್ಗಗಳು ತಗ್ಗು ದಿನ್ನೆಯಾಗಿಯೂ ಹಿರಿದು ಕಿರಿದಾಗಿಯೂ ಡೊಂಕಡೊಂಕಾಗಿಯೂ ಇರುತ್ತಿದ್ದವು. ಮಳೆಗಾಲದಲ್ಲಿ ಕೆಸರಾಯಿತೆಂದರೆ ಈ ಮಾರ್ಗಗಳಲ್ಲಿ ಮನುಷ್ಯರಿಗೆ ಸಹ ನಡಿಯುವದು ಅಸಾಧ್ಯವಾಗುತ್ತಿತ್ತು. ಈ ಮಾರ್ಗಗಳಲ್ಲಿ ಕಳ್ಳರ ಉಪದ್ರವಕ್ಕೂ ಕೊರತೆ ಇದ್ದಿಲ್ಲ. ಒಟ್ಟಿಗೆ ಆ ಕಾಲಕ್ಕೆ ಇಪ್ಪತ್ತು ಮೂವತ್ತು ಹರದಾರಿ ದೂರ ಹೋಗೋಣವೆಂದರೆ ದೂರ ದೇಶ ಪ್ರವಾಸಕ್ಕೆ ಹೋದಂತೆ ಕಷ್ಟವಾಗುತ್ತಿತ್ತು. ಬ್ರಿಟಿಶ ಸರಕಾರದ ಅಮಲಿನ ಆರಂಭದಲ್ಲಿ, ಅಂದರೆ ಸನ್ ೧೮೨೦ನೇ ವರ್ಷದ ಸುಮಾರಿನಲ್ಲಿ ಮೇಲೆ ಹೇಳಿದಂತೆ ಸ್ವಾಭಾವಿಕವಾಗಿ, ಮುಖ್ಯತಃ ದಂಡಿನವರ ತುಳಕಲದಿಂದ, ಬಿದ್ದಂಥ ದೀರ್ಘ ಮಾರ್ಗಗಳು ಮೂರು, ನಾಲ್ಕು ಮಾತ್ರ ಇದ್ದವು. ಒಂದು ಮಾರ್ಗವು ನಿಜಾಮನ ರಾಜ್ಯದಿಂದ ಸೊಲ್ಲಾಪುರ, ವಿಜಾಪುರ, ಬಾಗಲಕೋಟೆ, ಬೆಳಗಾವಿಗಳ ಮೇಲಿಂದ ವೆಂಗುರ್ಲೆಗೆ ಹೋಗುತ್ತಿತ್ತು; ಇನ್ನೊಂದು ಮಾರ್ಗವು ಪುಣೆಯಿಂದ ಸಾತಾರೆ, ಕೊಲ್ಲಾಪುರ ಚಿಕ್ಕೋಡಿ, ಬೆಳಗಾವಿ, ಧಾರವಾಡ, ಶಿರಸಿ, ಶಿಕಾರಪುರಗಳ ಮೇಲಿಂದ ಮೈಸೂರಿಗೆ ಹೋಗುತ್ತಿತ್ತು. ಪುಣೆಯಿಂದ ಯೆರಡನೇದೊಂದು ಮಾರ್ಗವು ಕೋರೆಗಾವ, ತಾಸಗಾವ, ಕಾಗವಾಡಗಳ ಮೇಲಿಂದ ಬೆಳಗಾವಿಗೆ ಬಂದು ಕೂಡುತ್ತಿತ್ತು. ೪ನೇ ಮಾರ್ಗವು ಬೆಳಗಾವಿಯಿಂದ ಕಾಗವಾಡ, ಕಲಾದಗಿಗಳ ಮೇಲಿಂದ ವಿಜಾಪುರಕ್ಕೆ ಹೋಗುತ್ತಿತ್ತು. ಪಂಢರಿಪುರದಿಂದ ಪುಣೆ, ಸೊಲ್ಲಾಪುರ, ವಿಜಾಪುರ, ಬಳ್ಳಾರಿ, ಮುಂತಾದ ಪಟ್ಟಣಗಳಿಗೆ ಅಡ್ಡ ತಿಡ್ಡ ಮಾರ್ಗಗಳಿದ್ದವು. ದೊಡ್ಡ ಮಾರ್ಗಗಳಲ್ಲಿ ಮಾತ್ರ ಮಳೆಗಾಲದಲ್ಲಿ ಹೊಳೆಗಳಲ್ಲಿ ನಾವೆಗಳಾಡುತ್ತಿದ್ದವು. ಆದರೂ ವೊಬ್ಬ ಮನುಷ್ಯನು ಹೊಳೆ ಪಾರಾಗಲಿಕ್ಕೆ ಇಡೀ ವೊಂದು ದಿವಸವೇ ಹೋಗುತ್ತಿತ್ತು.

ಸನ್ ೧೮೨೬ರಿಂದ ಇತ್ತ ಮಾರ್ಗಗಳು ಉತ್ತರೋತ್ತರವಾಗಿ ಸುಧಾರಿಸುತ್ತ ಬಂದವು; ಸನ್ ೧೮೫೦ರಿಂದ ಇತ್ತ ಛಕಡಿಗಳ ಮೇಲೆ ಸರಕುಗಳು ದೂರ ದೂರ ಹೋಗ ಹತ್ತಿದ್ದವು. ಈಗಿನ ಲೈನ ಮಾರ್ಗಗಳಲ್ಲಿ ಇಲಾಖೆಯ ಸರಕಾರದವರು ಮಾಡಿಸಿದ, ಅಂದರೆ ಪ್ರಾವಿನ್ಸಿಯಲ್, ಮಾರ್ಗಗಳೆಂತಲೂ ಲೋಕಲ್ ಫಂಡಿನ ಮಾರ್ಗಗಳೆಂತಲೂ ಯೆರಡು ಪ್ರಕಾರದ ಮಾರ್ಗಗಳಿರುತ್ತವೆ. ಪ್ರಾವಿನ್ಸಿಯಲ್ ಮಾರ್ಗಗಳು ಹಲವು ಜಿಲ್ಲೆಗಳಲ್ಲಿ ಹಾದು ದೂರ ದೂರಿನ ಪ್ರದೇಶಗಳಿಗೆ ಹೋಗುತ್ತವೆ. ಲೋಕಲ್ ಫಂಡಿನ ಮಾರ್ಗಗಳು ಪ್ರತಿಯೊಂದು ಜಿಲ್ಲೆಯ ಲೋಕಲ್ ಫಂಡಿನಿಂದ ಬೇರೆ ಬೇರೆ ಆಗುತ್ತಿರುತ್ತವೆ. ಆದರೂ ವೊಂದು ಜಿಲ್ಲೆಯ ಲೋಕಲ್ ಫಂಡಿನ ಮಾರ್ಗಗಳು ನೆರೆಜಿಲ್ಲೆಯ ಲೋಕಲ್ ಫಂಡಿನ ಮಾರ್ಗಗಳಿಗೆ ಇಲ್ಲವೆ ಪ್ರಾವಿನ್ಸಿಯಲ್ ಮಾರ್ಗಗಳಿಗೆ ಕೂಡಿ ದೂರ ದೂರಿನ ಗ್ರಾಮಗಳಿಗೆ ಹೋಗುತ್ತವೆ. ಈಗಿನ (೧೮೮೩) ಮುಖ್ಯ ಮುಖ್ಯ ಪ್ರಾವಿನ್ಸಿಯಲ್ ಮಾರ್ಗಗಳನ್ನು ಕೆಳಗೆ ವಿವರಿಸುತ್ತೇವೆ.

೧. ಪುಣೆಯಿಂದ ಹರಿಹರದ ವರೆಗೆ—ಇದು ದಕ್ಷಿಣ ಮಹಾರಾಷ್ಟ್ರದಲ್ಲಿ ಯೆಲ್ಲಕ್ಕೂ ದೊಡ್ಡ ಮಾರ್ಗವಿರುತ್ತದೆ. ಈ ಮಾರ್ಗದಲ್ಲಿ ಬರುವ ಹೊಳೆಗಳಿಗೆ ಬಹುತರ ಯೆಲ್ಲ ಕಡೆಯಲ್ಲಿ ಪೂಲುಗಳಾಗಿವೆ. ಮಾರ್ಗದ ಮೇಲೆ ಆಗಾಗ್ಗೆ ಗರಸು ಹಾಕಿ ರೂಳುಗಳನ್ನು ತಿರುಗಿಸುತ್ತಿರುವ ಕಾರಣ ಈ ಮಾರ್ಗವು ಹನ್ನೆರಡು ತಿಂಗಳೂ ವೊಂದೇ ಸವನಾಗಿ ನಡಿಯುತ್ತಿರುತ್ತದೆ. ಈ ಮಾರ್ಗವನ್ನು ಕಟ್ಟಿಸಲಿಕ್ಕೆ ಸುಮಾರು ೧೦ ಲಕ್ಷ ರೂಪಾಯಿ ವೆಚ್ಚವಾಗಿರುತ್ತದೆ. ಈ ಮಾರ್ಗವು ಪುಣೆಯಿಂದ ಸಾತಾರೆ, ಕೊಲ್ಲಾಪುರ, ಕಾಗಲ, ಬೆಳಗಾವಿ, ಧಾರವಾಡ, ಹುಬ್ಬಳ್ಳಿಗಳ ಮೇಲಿಂದ ಹರಿಹರದ ಹತ್ತರ ತುಂಗಭದ್ರೆಯ ದಂಡೆಗೆ ಮುಟ್ಟುತ್ತದೆ. ತುಂಗಭದ್ರೆಯೇ ಧಾರವಾಡ ಜಿಲ್ಲೆಯ ಶೀಮೆಯು. ಹರಿಹರದಿಂದ ಅತ್ತ ಇದು ಮೈಸೂರಿನ ಶೀಮೆಯಲ್ಲಿ ಹಾದು ಬೆಂಗಳೂರಿಗೂ ಮೈಸೂರಿಗೂ ಹೋಗುತ್ತದೆ.

೨. ಸೊಲ್ಲಾಪುರದಿಂದ ವೆಂಗುರ್ಲೆಗೆ—ಇದು ನಿಜಾಮನ ರಾಜ್ಯದೊಳಗಿಂದ ಬಂದು ಸೊಲ್ಲಾಪುರ, ವಿಜಾಪುರ ಬಾಗಲಕೋಟೆ, ಕಲಾದಗಿ, ಬೆಳಗಾವಿಗಳ ಮೇಲಿಂದ ವೆಂಗುರ್ಲೆಗೆ ಹೋಗುತ್ತದೆ. ಈ ಮಾರ್ಗದಲ್ಲಿ ಬರುವ ಹೊಳೆಗಳ ಮೇಲೆ ನಾವೆಗಳಿರುತ್ತವೆ. ಈ ಮಾರ್ಗದಿಂದ ಸರಕುಗಳು ಮುಂಬಯಿಗೆ ಹೋಗುತ್ತವೆ. ಈ ಮಾರ್ಗದಲ್ಲಿ ಮಳೆಗಾಲದಲ್ಲಿ ಹಲ ಕೆಲವು ಕಡೆಯಲ್ಲಿ ಕೆಸರಾಗಿ ಛಕಡಿಗಳಿಗೆ ಪ್ರಯಾಸವಾಗುತ್ತದೆ.

೩. ಬಾಗಲಕೋಟೆಯಿಂದ ಹುಬ್ಬಳ್ಳಿಗೆ—ಈ ಮಾರ್ಗದಲ್ಲಿ ಭೀಮಾ, ಕೃಷ್ಣಾ, ಘಟಪ್ರಭಾ, ಮಲಾಪಹಾರಿ, ಈ ಹೊಳೆಗಳನ್ನು ನಾವೆಗಳಲ್ಲಿ ದಾಟ ಬೇಕಾಗುತ್ತದೆ. ಈ ಮಾರ್ಗದಲ್ಲಾದರೂ ಮಳೆಗಾಲದಲ್ಲಿ ಅಲ್ಲಲ್ಲಿಗೆ ಕೆಸರಾಗುತ್ತದೆ.

೪. ವಿಜಾಪುರದಿಂದ ಸಾತಾರೆಗೂ ರತ್ನಾಗಿರಿಗೂ—ಈ ಮಾರ್ಗವು ಬಾಬಾನಗರ, ಬಿಜ್ಜರಗಿಗಳ ಮೇಲಿಂದ ಹೋಗುತ್ತದೆ.

೫. ಸೊಲ್ಲಾಪುರದಿಂದ ಬಳ್ಳಾರಿಗೆ—ಇದು ಇಂಡಿ, ಮುದ್ದೆಬಿಹಾಳ, ಹುನಗುಂದ, ಇಲಕಲ್ಲುಗಳ ಮೇಲಿಂದ ನಿಜಾಮನ ರಾಜ್ಯದಲ್ಲಿ ಶೇರಿ ಬಳ್ಳಾರಿಗೆ ಹೋಗುತ್ತದೆ.

೬. ಧಾರವಾಡದಿಂದ ತಿನಯಿಘಾಟ ಯೆಂಬ ಘಟ್ಟದ ವರೆಗೆ—ಇದು ತಿನಯಿಘಾಟದ ಕೆಳಗೆ ಗೋವೆಗೆ ಹೋಗುತ್ತದ.

೭. ಕಾರವಾಡದಿಂದ ಬಳ್ಳಾರಿಗೆ—ಇದು ಸುಪೆ, ಹುಬ್ಬಳ್ಳಿ, ಗದಗುಗಳ ಮೇಲಿಂದ ಬಳ್ಳಾರಿಗೆ ಹೋಗುತ್ತದೆ.

೮. ಧಾರವಾಡದಿಂದ ಕುಮಟೆಗೆ—ಇದು ಹುಬ್ಬಳ್ಳಿ, ಮುಂಡಗೋಡ, ಸಿರಸಿಗಳ ಮೇಲಿಂದ ಕುಮಟೆಗೆ ಹೋಗುತ್ತದ.

ಇವಲ್ಲದೆ ಆಯಾ ಜಿಲ್ಲೆಯ ಲೋಕಲ್ ಫಂಡಿನ ಮಾರ್ಗಗಳು ಅಸಂಖ್ಯ ಇರುತ್ತದೆ. ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲಿಕ್ಕೆ ಬಹುತರ ಲೈನ ಮಾರ್ಗವಿರುತ್ತದೆ. ಒಟ್ಟಿಗೆ ಲೈನ ಮಾರ್ಗದ ಮೇಲೆ ಇರದಂಥ ಹಳ್ಳಿಗಳು ಹತ್ತರದಲ್ಲಿ ಯೆರಡಾಗಲಿ ಮೂರಕ್ಕಿಂತ ಹೆಚ್ಚು ದೂರಿಯಲಿಕ್ಕಿಲ್ಲೆಂದು ಹೇಳ ಬಹುದು.

ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಛಕಡಿಗಳಿಗೆ ಅನುಕೂಲವಾದಂಥ ಲೈನ ಮಾರ್ಗಗಳಿಲ್ಲ. ಸಮುದ್ರದ ವೊತ್ತುಗಳು ಅಲ್ಲಲ್ಲಿಗೆ ಅಡ್ಡ ಬರುವ ಕಾರಣ ಛಕಡಿಯ ಮಾರ್ಗವನ್ನು ಮಾಡಲಿಕ್ಕೆ ಬರುವ ಹಾಗಿಲ್ಲ. ಆದರೆ ಆ ವೊತ್ತುಗಳಲ್ಲಿ ನಾವೆಗಳು ಹಗಲು ರಾತ್ರಿ ಆಡುತ್ತಿರುತ್ತವೆ. ಮುಖ್ಯವಾಗಿ ಕಾಳೀ ನದಿ, ಗಂಗಾವಳಿ, ತದಡಿಯ ವೊತ್ತು, ಇವುಗಳಲ್ಲಿ ನಾವೆಗಳು ೨೦, ೨೫ ಮ್ಯೆಲಿನ ವರೆಗೆ ಸಹ್ಯಾದ್ರಿಯ ಬುಡದ ಮಟ್ಟಿಗೂ ಆಡುತ್ತವೆ. ಕಾನಡಾ ಜಿಲ್ಲೆಯ ಸಮುದ್ರ ದಂಡೆ ೭೬ ಮ್ಯೆಲು ಇರುತ್ತವೆ. ಈ ದಂಡೆಯ ಸಮೀಪದಲ್ಲಿ ಸಣ್ಣ ದೊಡ್ಡ ಫತ್ತೆಮಾರಿಗಳು ಉತ್ತರಕ್ಕೆ ವೆಂಗುರ್ಲೆಯ ವರೆಗೂ, ದಕ್ಷಿಣಕ್ಕೆ ಮಂಗಳೂರಿನ ವರೆಗೂ ತಿರುಗಾಡುತ್ತವೆ. ಇವಲ್ಲದೆ ಮುಂಬಯಿಯಿಂದ ಮದ್ರಾಸದ ವರೆಗೆ ವಾರ ವಾರಕ್ಕೆ ಹೋಗ ಬರುವ ಹೊಗೆ ಹಡಗಗಳು ಬೇರೆ.

ನಾವೆಗಳೂ ಹರಗೋಲುಗಳೂ.—ವಿಜಾಪುರ ಜಿಲ್ಲೆಯಲ್ಲಿ ೯ ನಾವೆಗಳೂ ೩೪ ಹರಗೋಲುಗಳೂ ಸರಕಾರದಿಂದ ಇಡಲ್ಪಟ್ಟಿವೆ. ಇವುಗಳಲ್ಲಿ ಕೃಷ್ಣೆಯಲ್ಲಿ ೨೧ ನಡಿಯುತ್ತವೆ. ಬೆಳಗಾವೀ ಜಿಲ್ಲೆಯಲ್ಲಿ ೨೩ ನಾವೆಗಳೂ ೧೪ ಹರಗೋಲುಗಳೂ ನದಿಗಳಲ್ಲಿ ನಡಿಯುತ್ತವೆ;—೮ ಕೃಷ್ಣೆಯಲ್ಲಿ, ೯ ಘಟಪ್ರಭೆಯಲ್ಲಿ, ೧೨ ಮಲಾಪಹಾರಿಯಲ್ಲಿ, ಬಾಕೀ ೮ ಸಣ್ಣ ಹೊಳೆಗಳಲ್ಲಿ. ಧಾರವಾಡ ಜಿಲ್ಲೆಯಲ್ಲಿ ತುಂಗಭದ್ರೆಯಲ್ಲಿ ೧೨, ವರದೆಯಲ್ಲಿ ೧೫, ಮಲಾಪಹಾರಿಯಲ್ಲಿ ೧, ಕುಮುದ್ವತಿಯಲ್ಲಿ ೩, ಅಂತೂ ೩೧ ನಾವೆಗಳೂ ಹರಗೋಲುಗಳೂ ನಡಿಯುತ್ತವೆ. ಕಾನಡಾ ಜಿಲ್ಲೆಯಲ್ಲಿ ಹಿಂದೆ ಹೇಳಿದ ಕಾಳೀ ನದಿ, ಗಂಗಾವಳಿ, ತದಡೀ ವೊತ್ತುಗಳಲ್ಲದೆ ಬೇರೆ ಸಣ್ಣ ಸಣ್ಣ ವೊತ್ತುಗಳಲ್ಲಿಯೂ ಘಟ್ಟದ ಮೇಲಿನ ಭಾಗದಲ್ಲಿಯೂ ಕೂಡಿ ವೊಟ್ಟಿಗೆ ೩೦ ನಾವೆಗಳು ನಡಿಯುತ್ತವೆ.

ಘಟ್ಟದ ಮಾರ್ಗಗಳು.—ವಿಜಾಪುರ ಧಾರವಾಡ ಜಿಲ್ಲೆಗಳ ಹದ್ದಿನಲ್ಲಿ ಘಟ್ಟದ ಮಾರ್ಗಗಳಿಲ್ಲ. ಬೆಳಗಾವೀ ಜಿಲ್ಲೆಯಲ್ಲಿ ಅಂಬೋಲಿ ಅಥವಾ ಪಾರಪೋಲಿ, ರಾಮಘಟ್ಟ, ಚೋರ್ಲಾ, ಪಾರವಾ, ಕೇಳ, ತಾನೆರಿ, ತಿನಯಾ, ಯೆಂಬ ೭ ಘಟ್ಟದ ಮಾರ್ಗಗಳಿರುತ್ತವೆ. ಅಂಬೋಲೀ ಘಟ್ಟವು ಬೆಳಗಾವಿಯಿಂದ ವೆಂಗುರ್ಲೆಯ ಮಾರ್ಗದಲ್ಲಿ ಇರು

ತ್ತವೆ. ಈ ಮಾರ್ಗವನ್ನು ಸನ್ ೧೮೭೦ರಲ್ಲಿ ಕಟ್ಟಿಸಿದರು. ಈ ಮಾರ್ಗವು ಛಕಡಿಗಗಳಿಗೆ ಬಹಳ ಹಿತಕರವಾದ್ದರಿಂದ ಇದರಲ್ಲಿ ಹಗಲು ರಾತ್ರಿ ಛಕಡಿಗಳು ನಿರಾತಂಕವಾಗಿ ನಡಿಯುತ್ತವೆ. ರಾಮ ಘಟ್ಟವು ವೆಂಗುರ್ಲೆಗೆ ಹೋಗುವ ಪೂರಾತನದ ಮಾರ್ಗವು. ಇದು ೩ ಮೈಲಿಗಿಂತ ಹೆಚ್ಚು ಇರದಿದ್ದಾಗ್ಯೂ, ಇದರಲ್ಲಿ ಛಕಡಿಗಳು ಪಾರಾಗಿ ಹೋಗಲಿಕ್ಕೆ ಇಡೀ ವೊಂದು ದಿವಸವೇ ಬೇಕಾಗುತ್ತಿತ್ತು. ಇದು ಕಟ್ಟಿಸಿದ ಮಾರ್ಗವಲ್ಲ. ಅಂಬೋಲಿಯ ಮಾರ್ಗವಾದಂದಿನಿಂದ ರಾಮ ಘಟ್ಟದ ಮಾರ್ಗವು ಹಿಂದಕ್ಕೆ ಬಿತ್ತು. ಉಳಿದ ೫ ಮಾರ್ಗಗಳು ಗೋವೆಯ ಶೀಮೆಗೂ ಕಾನಡಾ ಜಿಲ್ಲೆಗೂ ಹೋಗುವ ಕಾಲು ದಾರಿಗಳಿರುತ್ತವೆ. ಕಟ್ಟಿಸಿದ ಮಾರ್ಗಗಳಲ್ಲ. ಚೋರ್ಲಾ ಘಟ್ಟದಲ್ಲಿ ಮಾತ್ರ ಛಕಡಿಗಳು ಕಷ್ಟದಿಂದ ಸಾಗುತ್ತವೆ. ಕಾನಡಾ ಜಿಲ್ಲೆಯಲ್ಲಿ ವೊಟ್ಟಿಗೆ ೧೭ ಘಟ್ಟದ ಮಾರ್ಗಗಳಿರುತ್ತವೆ. ಇವುಗಳಲ್ಲಿ ದೇವೀಮನಿ, ಅನಶಿ, ಅರ್ಬೈಲಿ, ಚೋರ್ಲಾ, ಇವು ನಾಲ್ಕು ಮುಖ್ಯ. ಶಿರಸಿಯಿಂದ ಕುಮುಟೆಗೆ ಹೋಗುವ ದೊಡ್ಡ ಮಾರ್ಗದಲ್ಲಿ ದೇವೀಮನಿ ಘಟ್ಟವಿರುತ್ತದೆ. ಅನಶೀ ಘಟ್ಟವು ಸುಪೆಯಿಂದ ಬೆಳಗಾವಿಗೆ ಹೋಗುವ ಮಾರ್ಗದಲ್ಲಿ ಇರುತ್ತದೆ. ಅರ್ಬೈಲಿ ಘಟ್ಟವು ಧಾರವಾಡದಿಂದ ಕಾರವಾಡಕ್ಕೆ ಹೋಗುವ ಮಾರ್ಗದಲ್ಲಿ ಇರುತ್ತದೆ. ಇವುಗಳಲ್ಲಿ ದೇವೀಮನಿ, ಅರ್ಬೈಲಿ, ಇವೆರಡು ಮಾತ್ರ ವೊಳಿತಾಗಿ ಕಟ್ಟಿಸಿದಂಥ ಛಕಡಿಯ ಮಾರ್ಗಗಳಿರುತ್ತವೆ. ಉಳಿದವೆಲ್ಲ ಬಹುತರ ಕಾಲು ದಾರಿಗಳೇ; ಕೆಲವುಗಳಲ್ಲಿ ಛಕಡಿಗಳು ಕಷ್ಟದಿಂದ ಪಾರಾಗುತ್ತವೆ. ಈ ಘಟ್ಟಗಳ ವಿವರ ಹ್ಯಾಗಂದರೆ— ಕಾರವಾಡ ತಾಲೂಕಿನಲ್ಲಿ ೨, ಹೊನ್ನಾವರದ ತಾಲೂಕಿನಲ್ಲಿ ೨, ಸುಪೆ ತಾಲೂಕಿನಲ್ಲಿ ೬, ಯಲ್ಲಾಪುರ ತಾಲೂಕಿನಲ್ಲಿ ೨, ಶಿರಸೀ ತಾಲೂಕಿನಲ್ಲಿ ೪, ಸಿದ್ದಾಪುರ ತಾಲೂಕಿನಲ್ಲಿ ೧.

ಹೊಗೆಬಂಡಿಯ ಮಾರ್ಗಗಳು.— ದಕ್ಷಿಣೋತ್ತರ ಮಾರ್ಗಗಳೆರಡು, ಪೂರ್ವ ಪಶ್ಚಿಮ ಮಾರ್ಗ ೧, ಅಂತೂ ಮೂರು ಹೊಗೆಬಂಡಿಯ ಮಾರ್ಗಗಳಿರುತ್ತವೆ. ಪೂರ್ವ ಪಶ್ಚಿಮ ಮಾರ್ಗವು ಸಹ್ಯಾದ್ರಿಯಲ್ಲಿ ಲೊಂಢೆ ಯೆಂಬಲ್ಲಿಂದ ಹೊರಟು ಧಾರವಾಡ, ಹುಬ್ಬಳ್ಳಿ, ಗದಗುಗಳ ಮೇಲಿಂದ ಬಳ್ಳಾರಿಗೆ ಹೋಗಿರುತ್ತದೆ. ಈ ಮಾರ್ಗವು ಲೊಂಢೆಯ ಪಶ್ಚಿಮಕ್ಕೆ ಘಟ್ಟವಿಳಿದು ಗೋವೆಗೆ ಹೋಗುತ್ತದೆ. ಈ ಮಾರ್ಗದಲ್ಲಿ ಹುಬ್ಬಳ್ಳಿಯಿಂದ ವೊಂದು ಶಾಖೆಯು ಆಗ್ನೇಯಕ್ಕೆ ಸಾಗಿ ಹಾವೇರಿಯ ಮೇಲಿಂದ ಹರಿಹರಕ್ಕೆ ಹೋಗುತ್ತದೆ. ಅಲ್ಲಿಂದ ಮುಂದೆ ಅದು ಮೈಸೂರಿಗೆ ಹೋಗಿದೆ. ಪೂರ್ವ ದಿಕ್ಕಿನ ದಕ್ಷಿಣೋತ್ತರ ಮಾರ್ಗವು ಪುಣೆಯಿಂದ ಸೊಲ್ಲಾಪುರಕ್ಕೆ ಹೋಗುವ ಜೀ. ಆಯ. ಪೀ. ಮಾರ್ಗದ ಹುಟಗಿ ಸ್ಟೇಶನ್ನಿನಿಂದ ಹೊರಟು ಇಂಡಿ, ವಿಜಾಪುರ, ಬಾಗಲಕೋಟೆ, ಬಾದಾಮಿಗಳ ಮೇಲಿಂದ ಗದಗಿನ ಸ್ಟೇಶನ್ನಿಗೆ ಬಂದು ಕೂಡುತ್ತದೆ. ಪಶ್ಚಿಮ ದಿಕ್ಕಿನ ದಕ್ಷಿಣೋತ್ತರ ಮಾರ್ಗವು ಪುಣೆಯಿಂದ ಹೊರಟು ಕೋರೆಗಾವ, ಕರಾಡ, ಸಾಂಗಲಿ, ಮಿರ್ಜಿ, ಬೆಳಗಾವಿಗಳ ಮೇಲಿಂದ ಲೊಂಢೆಯ ಸ್ಟೇಶನಕ್ಕೆ ಕೂಡುತ್ತದೆ. ಹುಟಗಿಯಿಂದ ಗದಗಿಗೆ ಬರುವ ಮಾರ್ಗದಲ್ಲಿ ಮಾಲೂ ಮನುಷ್ಯರೂ ಹೋಗುವದು ಬಹು ಕಡಿಮೆ. ಉಳಿದ ಯೆಲ್ಲ ರೇಲ್ ಮಾರ್ಗಗಳಲ್ಲಿ ದಿನ ದಿನಕ್ಕೆ ರಹದಾರಿಯು ಬೆಳಿಯುತ್ತ ನಡಿದದೆ. ಈ ಯಾವತ್ತು

ಮಾರ್ಗಗಳನ್ನು ಸದರ್ನ ಮರಾಠಾ ರೇಲ್ವೇ ಕಂಪನಿ ಯೆಂಬ ಸಂಘದವರು ಕಟ್ಟಿಸಿದ್ದರಿಂದ ಇವುಗಳಿಗೆ ಸಂಕ್ಷೇಪದಿಂದ ಎಸ್. ಎಮ್ ರೇಲ್ವೆಯೆಂಬೆನ್ನುವರು. ಈ ಮಾರ್ಗಗಳನ್ನು ಕಟ್ಟುವ ಪೂರ್ವದಲ್ಲಿ ವರ್ಷಕ್ಕೆ ಶೇಕಡಾ ೫ರಂತೆ ನಫೆ ಆಗದಿದ್ದರೆ, ಕಡಿಮೆ ಬಿದ್ದದ್ದನ್ನು ನಾವು ಭರ್ತೀ ಮಾಡಿ ಕೊಡುತ್ತೇವೆಂದು ಸರಕಾರದವರು ರೇಲ್ವೇ ಕಂಪನಿಯವರಿಗೆ ಹೊಣೆಯಾದದ್ದರಿಂದ ಈ ಮಾರ್ಗಗಳಾಗಿವೆ. ರೇಲ್ವೇ ಕಂಪನಿಯವರಿಗೆ ಇನ್ನೂ (೧೮೯೧) ಶೇಕಡಾ ೫ರಂತೆ ನಫೆ ದೊರಿಯುವದಿಲ್ಲಾದ ಕಾರಣ ಸರಕಾರದವರು ಪ್ರತಿ ವರ್ಷ ಲಕ್ಷಾವಧಿ ರೂಪಾಯಿಯನ್ನು ರೇಲ್ವೇ ಕಂಪನಿಯವರಿಗೆ ಕೊಡಬೇಕಾಗುತ್ತದೆ. ಆದರೆ ಸ್ವಲ್ಪ ದಿವಸದೊಳಗೆ ಸರಕಾರದ ಮೇಲಿನ ಈ ಹೊರೆಯು ತಪ್ಪೀತೆಂಬ ಆಶೆಯುಂಟು. ಮಿರ್ಜಿಯಿಂದ ಮುಧೋಳ, ಜಮುಖಂಡಿಗಳ ಮೇಲಿಂದ ಬಾಗಲಕೋಟೆಯ ವರೆಗೆ ವೊಂದು ಶಾಖೆಯನ್ನು ಕಟ್ಟಿಸುವ ಆಲೋಚನೆಯು ನಡಿದದೆ.

**ಟಪಾಲ ಆಫೀಸುಗಳು.**

ಟಪಾಲ ಆಫೀಸುಗಳು.—ಟಪಾಲ ಆಫೀಸುಗಳಲ್ಲಿ ೩ ವರ್ಗಗಳಿವೆ. ಹೆಡ್ ಆಫೀಸೆಂಬ ೧ನೇ ವರ್ಗದ ಆಫೀಸುಗಳಲ್ಲಿ ಯಾವತ್ತು ಪ್ರಕಾರದ ಟಪಾಲು ಬಂದು, ಜಿಲ್ಲೆಯೊಳಗಿನ ತಾಲೂಕಿನ ಆಫೀಸುಗಳಿಗೆ ಹೋಗ ತಕ್ಕ ಟಪಾಲು ಅಲ್ಲಿಗೆ ಹೋಗುತ್ತದೆ, ಪರಜಿಲ್ಲೆಗಳಿಗೆ ಪೋಗ ತಕ್ಕ ಟಪಾಲು ಅತ್ತಕಡೆಗೆ ಹೋಗುತ್ತದೆ. ಸಬ ಆಫೀಸೆಂಬ ೨ನೇ ವರ್ಗದ ಆಫೀಸುಗಳಿಗೆ ಹೆಡ್ ಆಫೀಸಿನಿಂದಲೂ, ಜಿಲ್ಲೆಯೊಳಗಿನ ಬೇರೆ ಸಬ ಆಫೀಸುಗಳಿಂದಲೂ ಟಪಾಲು ಬಂದು ಜಿಲ್ಲೆಯೊಳಗೇ ಮತ್ತೊಂದು ಕಡೆಗೆ ರವಾನೆಯಾಗುತ್ತದೆ. ಹಳ್ಳಿಗಳ ಟಪಾಲ ಆಫೀಸೆಂಬ ೩ನೇ ವರ್ಗದ ಆಫೀಸುಗಳು ಶಾಲಾ ಮಾಸ್ತರರ ಕೈಯಲ್ಲಿ ಇರುತ್ತವೆ. ಅವುಗಳಲ್ಲಿಯೂ ಸಬ ಆಫೀಸಿನಂತೆ ಟಪಾಲು ಬರು ಹೋಗುವ ಕ್ರಮವಿರುತ್ತದೆ. ನಾಲ್ಕೂ ಜಿಲ್ಲೆಗಳಲ್ಲಿ ಕೂಡಿ ವೊಟ್ಟಿಗೆ ೧೫೦ ಟಪಾಲ ಆಫೀಸುಗಳಿರುತ್ತವೆ. ಅವುಗಳ ವಿವರ— ವಿಜಾಪುರದಲ್ಲಿ ೨ ಹೆಡ್ ಆಫೀಸುಗಳು, ವೊಂದು ವಿಜಾಪುರದಲ್ಲಿ ಯೆರಡನೇದು ಕಲಾದಗಿಯಲ್ಲಿ; ೧೫ ಸಬ ಆಫೀಸುಗಳು; ೧೩ ಹಳ್ಳಿಯ ಆಫೀಸುಗಳು. ಬೆಳಗಾವೀ ಜಿಲ್ಲೆಯಲ್ಲಿ ೧ ಹೆಡ್ ಆಫೀಸು ಬೆಳಗಾವಿಯಲ್ಲಿ; ೨೯ ಸಬ ಆಫೀಸುಗಳು; ೧೨ ಹಳ್ಳಿಯ ಆಫೀಸುಗಳು. ಧಾರವಾಡ ಜಿಲ್ಲೆಯಲ್ಲಿ ೧ ಹೆಡ್ ಆಫೀಸು ಧಾರವಾಡದಲ್ಲಿ; ೩೦ ಸಬ ಆಫೀಸುಗಳು; ೧೮ ಹಳ್ಳಿಯ ಆಫೀಸುಗಳು. ಕಾನಡಾ ಜಿಲ್ಲೆಯಲ್ಲಿ ೧ ಹೆಡ್ ಆಫೀಸು ಕಾರವಾಡದಲ್ಲಿ; ೧೬ ಸಬ ಆಫೀಸುಗಳು; ೧೧ ಹಳ್ಳಿಯ ಆಫೀಸುಗಳು.

ತಂತಿಯ ಟಪಾಲಿನ ಆಫೀಸುಗಳು.—ಇವು ನಾಲ್ಕೂ ಜಿಲ್ಲೆಗಳ ಮುಖ್ಯ ಗ್ರಾಮಗಳಲ್ಲಿ ಇರುವದಲ್ಲದೆ, ಕುಮಟಾ, ಹುಬ್ಬಳ್ಳಿ, ಗದಗು, ಈ ಮೂರು ಸ್ಥಳಗಳಲ್ಲಿಯೂ ವೊಂದೊಂದು ಇರುತ್ತವೆ. ಒಟ್ಟಿಗೆ ೬.

ದೀಪ ಸ್ತಂಭಗಳು.—ಕಾನಡಾ ಜಿಲ್ಲೆಯ ಸಮುದ್ರ ದಂಡೆಯಲ್ಲಿ ರಾತ್ರಿಯಲ್ಲಿ ಹಡಗಗಳಿಗೆ ದಿಗ್ದರ್ಶನ ಮಾಡುವದಕ್ಕೋಸ್ಕರ ಮೂರು ಯೆತ್ತರವಾದ ದೀಪಸ್ತಂಭಗಳನ್ನು ಕಟ್ಟಿಸಿದ್ದಾರೆ. ಕಾರವಾಡದಲ್ಲಿ ದೇವಗಡವೆಂಬ ಗುಡ್ಡದ ಮೇಲೆ ವೊಂದು ಇರುತ್ತದೆ.

ಇದು ಸಮುದ್ರದ ಪೃಷ್ಠ ಭಾಗದ ಮೇಲೆ ೨೧೦ ಫೂಟು ಯತ್ತರವದೆ. ಇದರ ಬೆಳಕು ಬೆಳ್ಳಗಾಗಿ ಸುಮಾರು ೨೫ ಮೈಲಿನ ಅಂತರದಲ್ಲಿ ಸಮುದ್ರದೊಳಗೆ ಕಾಣಿಸುವದು. ಇದನ್ನು ಸನ್ ೧೮೭೪ನೇ ವರ್ಷ ಸರಕಾರದವರು ಕಟ್ಟಿಸಿದರು. ಎರಡನೇ ದೀಪಸ್ತಂಭವಾದರೂ ಕಾರವಾಡದಲ್ಲಿಯೇ ಕೋಸ್ತೇಯೆಂಬಲ್ಲಿ ಇರುತ್ತದೆ. ಇದು ಸಮುದ್ರದ ಪೃಷ್ಠ ಭಾಗದ ಮೇಲೆ ೬೫ ಫೂಟು ಎತ್ತರವಿರುವದು. ಇದರ ಬೆಳಕು ಕೆಂಪಗಾಗಿ ಸಮುದ್ರದೊಳಗೆ ೫ ಮೈಲಿನ ಅಂತರದಲ್ಲಿ ಕಾಣಿಸುವದು. ಮೂರನೇ ಸ್ತಂಭವು ಕುಮುಟೆಯಲ್ಲಿ ೧೮೦ ಫೂಟು ಯತ್ತರವಾಗಿ ಇರುವದು. ಇದರ ಬೆಳಕು ಬೆಳ್ಳಗಾಗಿ ೯ ಮೈಲಿನ ಅಂತರದಲ್ಲಿ ಸಮುದ್ರದೊಳಗೆ ಕಾಣಿಸುತ್ತದೆ. ಇದನ್ನು ಸನ್ ೧೮೫೫ರಲ್ಲಿ ಕಟ್ಟಿಸಿದರು.

**ದೀಪಸ್ತಂಭಗಳು.**

## ೨ನೇ ಪ್ರಕರಣ—ವ್ಯಾಪಾರ.

**ವ್ಯಾಪಾರದ ಇತಿಹಾಸ.**

ಕಾನಡಾ ಜಿಲ್ಲೆಯ ವ್ಯಾಪಾರವು ಬಹು ಪುರಾತನ ಕಾಲದಿಂದ ಹೆಸರಾಗಿದೆ. ಶ್ರೀಗಂಧ, ಯಾಲಕ್ಕಿ, ಮೆಣಸು, ಅಡಿಕೆ, ಅಕ್ಕಿ, ಫಲಗಳು, ಕಬ್ಬಿಣ, ವಸ್ತ್ರಗಳು, ಮುಂತಾದ ಪದಾರ್ಥಗಳು ಕಾನಡಾ ಜಿಲ್ಲೆಯ ಬಂದರಗಳಿಂದ ಪರರಾಷ್ಟ್ರಗಳಿಗೆ ಬುನಾದಿಯಲ್ಲಿ ಹೋಗುತ್ತಿದ್ದವು. ಖ್ರಿಸ್ತೀ ಶಕದ ಪೂರ್ವದಲ್ಲಿ ಸುಮಾರು ೧೫೦೦ ವರ್ಷಗಳ ಹಿಂದೆ ಅಥವಾ ಅದಕ್ಕೂ ಪೂರ್ವದಲ್ಲಿ ಫಿನೀಶಿಯ, ಅರಬಸ್ತಾನ, ಈ ದೇಶಗಳ ವ್ಯಾಪಾರಸ್ಥರು ಕಾನಡಾ ಜಿಲ್ಲೆಗೆ ಬಂದು ಮೇಲೆ ಹೇಳಿದ ಸರಕುಗಳನ್ನು ವೈದು ತುರ್ಕಸ್ತಾನ, ಅರಬಸ್ತಾನ, ಮುಂತಾದ ರಾಷ್ಟ್ರಗಳಲ್ಲಿ ಮಾರಾಟ ಮಾಡುವರು. ಹಿಂದುಸ್ತಾನದಿಂದ ಯಹುದೀ ದೇಶಕ್ಕೆ ಹೋಗುತ್ತಿದ್ದಂಥ ೨೦ ಪ್ರಕಾರದ ಸರಕುಗಳ ವಿವರವು ಬಾಯಬಲಿನಲ್ಲಿ ಹೇಳಲ್ಪಟ್ಟದೆ. ಆ ದೇಶದ ಸಾಲೋಮನ್ನನೆಂಬ ಅರಸನ ಆಳಿಕೆಯಲ್ಲಿ ಈ ವ್ಯಾಪಾರವು ವೊಳಿತಾಗಿ ನಡಿಯುತ್ತಿತ್ತೆಂದು ಬಾಯಬಲಿನಲ್ಲಿ ಹೇಳಿರುತ್ತದೆ. ಖ್ರಿಸ್ತೀ ಶಕದ ಪೂರ್ವದಲ್ಲಿ ದಕ್ಷಿಣ ದೇಶದಲ್ಲಿ ಬನವಾಸಿಯು ಹೆಸರಾದ ರಾಜಧಾನಿಯಾಗಿತ್ತು. ಪರರಾಷ್ಟ್ರಗಳಲ್ಲಿ ಖ್ರಿಸ್ತೀ ಶಕದ ಪೂರ್ವದಲ್ಲಿ ೨೫೦ ವರ್ಷದ ಸುಮಾರಿನಲ್ಲಿ ಬರಿದಿಟ್ಟ ಲೇಖಗಳಲ್ಲಿ ಬನವಾಸಿಯ ಹೆಸರು ಕಾಣ ಬಹುದು. ಬನವಾಸಿಯ ರಾಜ್ಯದಿಂದ ನಾನಾ ಪ್ರಕಾರದ ಸರಕುಗಳು ಹೊನ್ನಾವರ, ಭಟಕಳ, ಮುಂತಾದ ಬಂದರಗಳಿಗೆ ಹೋಗಿ ಅಲ್ಲಿಂದ ಪರದೇಶಗಳಿಗೆ ಹೋಗುತ್ತಿದ್ದವು. ಖ್ರಿಸ್ತೀ ಶಕದ ೨೪೭ನೇ ವರ್ಷದ ಸುಮಾರಿನಲ್ಲಿ ಗ್ರೀಸ ದೇಶದವನೊಬ್ಬ ಅರಿಯನ್ನನೆಂಬ ಇತಿಹಾಸ ಕರ್ತನು ಬರಿದಿಟ್ಟ "ಪೆರಿಪ್ಲಸ"ವೆಂಬ ಗ್ರಂಥದಲ್ಲಿ ಹೊನ್ನಾವರದ ಹೆಸರು "ನಾವುರ"ವೆಂದು ಬರಿದದೆ. ಇದರಂತೆ ಗ್ರೀಕ ವ್ಯಾಪಾರಸ್ಥರು ಕಾನಡಾ ಜಿಲ್ಲೆಯ "ಮುಝಿರಿಸ" ಯೆಂಬ ಬಂದರದಿಂದ ಖ್ರಿಸ್ತೀ ಶಕದ ೩ನೇ ಶತಕದ ವರೆಗೆ ಸರಕುಗಳನ್ನು ವೊಯ್ಯುತ್ತಿದ್ದರು. "ಮುಝಿರಿಸ" ಯೆಂದರೆ ಮಿರ್ಜಾನವೆಂದು ವೊಳಗಡೆಯಲ್ಲಿ ಗೊತ್ತಾಗಿದೆ. ಮಿರ್ಜಾನವು ಹೊನ್ನಾವರದ ಉತ್ತರದಲ್ಲಿ ೧೦ ಮೈಲಿನ ಮೇಲೆ ಇರುತ್ತದೆ. (೧೪ನೇ ಭಾಗದಲ್ಲಿ

ಮಿರ್ಜಾನದ ವರ್ಣನೆ ನೋಡು). ಇದರಂತೆ ಗ್ರೀಸ ದೇಶದ ಬೇರೆ ಗ್ರಂಥಕಾರರೂ, ಇಜಿಪ್ತ, ರೋಮ (ಇತಲಿ) ದೇಶಗಳ ಗ್ರಂಥ ಲೇಖಕರೂ ಹಿಂದುಸ್ತಾನದ ಪಶ್ಚಿಮ ಸಮುದ್ರತೀರದ ಬಂದರಗಳನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಆ ಕಾಲಕ್ಕೆ ಹೊನ್ನಾವರ ಮುಂತಾದ ಬಂದರಗಳಿಂದ ಮೆಣಸು, ಮುತ್ತು, ವಜ್ರ, ಮಾಣಿಕ, ಬೇರೆ ಹರಳುಗಳು, ಆನೆಯ ಹಲ್ಲು, ರೇಶಿಮೆಯ ವಸ್ತ್ರ, ತಮಾಲಪತ್ರ, ಮುಂತಾದ ಸರಕುಗಳು ಗ್ರೀಸ, ರೋಮ, ಇಜಿಪ್ತ, ಅರಬಸ್ತಾನ, ತುರ್ಕಸ್ತಾನ, ಮುಂತಾದ ರಾಷ್ಟ್ರಗಳಿಗೆ ಹೋಗುತ್ತಿದ್ದವು; ಪರದೇಶಗಳಿಂದ ಚಿನ್ನ ಬೆಳ್ಳಿಗಳ ನಾಣ್ಯಗಳು, ವೈಢೂರ್ಯ, ಧಡೋತಿಯ ವಸ್ತ್ರ, ಹವಳ, ಬಿಳಿ ಕಾಜು, ತವರು, ಸೀಸು, ಹಿತ್ತಾಳಿ, ದ್ರಾಕ್ಷಾಮದ್ಯ, ಇಂಗಳೀಕ, ಮುಂತಾದ ಸರಕುಗಳು ಕಾನಡಾ ಜಿಲ್ಲೆಯ ಬಂದರಗಳಿಗೆ ಬರುತ್ತಿದ್ದವು. ಕ್ರಿಸ್ತೀ ಶಕದ ೫ನೇ ಶತಕದಿಂದ ೧೫ನೇ ಶತಕದ ವರೆಗೆ ಸದರೀ ಸರಕುಗಳಲ್ಲಿ ಮುಖ್ಯವಾಗಿ ಮೆಣಸಿನ ವ್ಯಾಪಾರವು ಹೊನ್ನಾವರ, ಭಟಕಳ, ಮುಂತಾದ ಬಂದರಗಳಲ್ಲಿ ಬಹಳವಾಗಿ ನಡಿಯುತ್ತಿತ್ತೆಂದು ತಿಳಿದದೆ. ಈ ಅವಧಿಯಲ್ಲಿ ಅರಬಸ್ತಾನದ ಕುದುರೆಗಳು ಸದರೀ ಬಂದರಗಳಿಗೆ ಬಹಳವಾಗಿ ಬರ ಹತ್ತಿದವು. ೧೫ನೇ ಶತಕದ ಕಡೆಯಲ್ಲಿ ಪೋರ್ತುಗೀಸರು ಈ ದೇಶಕ್ಕೆ ಬಂದ ಬಳಿಕ ಕಾನಡಾ ಜಿಲ್ಲೆಯ ಬಂದರಗಳಲ್ಲಿ ಅಪರಿಮಿತವಾಗಿ ಬೆಳೆದ ವ್ಯಾಪಾರದ ವೃತ್ತಾಂತವು ಇತಿಹಾಸದಲ್ಲಿ ಪ್ರಸಿದ್ಧವಿರುತ್ತದೆ.

ಬ್ರಿಟಿಷ ಸರಕಾರದ ಅಮಲು ಆದಂದಿನಿಂದ ಮಾರ್ಗಗಳು ಕ್ರಮ ಕ್ರಮವಾಗಿ ಕಟ್ಟಲ್ಪಟ್ಟು ಛಕಡಿಗಳು ನಡಿಯ ಹತ್ತಿದವು; ಟಪಾಲ ಆಫೀಸುಗಳುಂಟಾದವು; ತಂತಿ ಟಪಾಲು ನೆಲೆಗೊಂಡಿತು; ಸಮುದ್ರದಲ್ಲಿ ಹಡಗಗಳನ್ನು ಸುಲಿಯುತ್ತಿದ್ದ ಕಳ್ಳರು ನಿರ್ಮೂಲವಾದರು. ಆದ್ದರಿಂದ ನಾಲ್ಕೂ ಜಿಲ್ಲೆಗಳ ವೊಳದೇಶದ ವ್ಯಾಪಾರವೂ ಹೊರಗಿನ ವ್ಯಾಪಾರವೂ ಉತ್ತರೋತ್ತರವಾಗಿ ಬೆಳಿಯುತ್ತ ಬಂತು. ಈಗ ತೇಗು, ಶ್ರೀಗಂಧ, ಯಾಲಕ್ಕಿ, ಮೆಣಸು, ಅಡಿಕೆ, ಅಕ್ಕಿ, ಗೋಧಿ, ಕಡ್ಲೆ, ಅರಳೆ, ಮುಂತಾದ ಸರಕುಗಳು ಮುಂಬಯಿ, ರತ್ನಾಗಿರಿ, ಸಾತಾರೆ, ಪುಣೆ, ಸೊಲ್ಲಾಪುರ, ಬಾರ್ಶಿ, ಬಳ್ಳಾರಿ, ಮೈಸೂರು, ಮುಂತಾದ ಪರಸ್ಥಳಗಳಿಗೆ ಹೋಗುತ್ತವೆ. ಹೊರಗಿಂದ ವಿಲಾಯತಿಯ ವಸ್ತ್ರ ಮುಂತಾದ ಸರಕುಗಳು, ದೇಶೀ ವಸ್ತ್ರಗಳು, ಬೆಳ್ಳಿ, ಬಂಗಾರಗಳು, ತಾಮ್ರ ಹಿತ್ತಾಳಿಗಳ ಪಾತ್ರೆಗಳು, ಕಾಜಿನ ಬಳೆ, ಅರಗಿನ ಬಳೆ, ಕಬ್ಬಿಣದ ಸಾಮಾನು, ತಟ್ಟು, ಮುಂತಾದ ಸರಕುಗಳು ಈ ಶೀಮೆಗೆ ಬರುತ್ತವೆ.

ನಾಲ್ಕು ಜಿಲ್ಲೆಗಳಲ್ಲಿಯ ವ್ಯಾಪಾರದ ಮುಖ್ಯ ಗ್ರಾಮಗಳ ವಿವರ, ಉತ್ತರದಿಂದ ದಕ್ಷಿಣಕ್ಕೆ, ಹ್ಯಾಗಂದರೆ—

ಇಂಡೀ ತಾಲೂಕಿನಲ್ಲಿ ಇಂಡಿ, ತಂಬ, ಚಡಚಾಣ, ಹಲಸಂಗಿ, ಈ ಗ್ರಾಮಗಳಲ್ಲಿ ಸಂತೆಗಳಾಗುತ್ತವೆ. ವ್ಯಾಪಾರದ ಮುಖ್ಯ ಗ್ರಾಮಗಳಾದ ಇಂಡಿಯಲ್ಲಿಯೂ ತಂಬದಲ್ಲಿಯೂ ಕೂಡಿ ಸುಮಾರು ೩೦೦ ಜನ ವ್ಯಾಪಾರಸ್ಥರು, ೫೦೦೦ ದಿಂದ ೨ ಲಕ್ಷದ ವರೆಗೆ ಬಂಡವಲುಳ್ಳವರು ವಸ್ತ್ರ, ಅಕ್ಕಿ,

**ವಿಜಾಪುರ ಜಿಲ್ಲೆ.**

ಕಿರಾಣಿ, ತೆಂಗಿನ ಕಾಯಿ, ಮುಂತಾದವುಗಳನ್ನು ಹೊರಗಿಂದ ತರುವರು; ಜೋಳ, ಶೆಜ್ಜೆ, ಗೋಧಿ, ಕಡ್ಲೆ, ಅಗಸೆ, ಅರಳೆ, ಮುಂತಾದವುಗಳನ್ನು ಹೊರಗೆ ಕಳಿಸುವರು.

ಸಿಂದಗೀ ತಾಲೂಕಿನಲ್ಲಿ ಸಿಂದಗಿ, ಹಿಪ್ಪರಿಗಿ, ಭಟನೂರು, ಮೋರಟಗಿ, ಮಲಘಾಣ, ಆಲಮೇಲ, ಕೋವಾರ, ಗೋಲಗೇರಿ, ಈ ಗ್ರಾಮಗಳಲ್ಲಿ ಸಂತೆಗಳಾಗುತ್ತವೆ. ವ್ಯಾಪಾರದ ಮುಖ್ಯ ಗ್ರಾಮಗಳಾದ ಅಲಮೇಲಿ, ಹಿಪ್ಪರಿಗಿ, ಕಲಕೇರಿ, ಮೊರಟಗಿ, ಸಿಂದಗಿ, ಇವುಗಳಲ್ಲಿ ಕೂಡಿ ೫೦ ಜನ ವ್ಯಾಪಾರಸ್ಥರು ೫೦ರಿಂದ ೨೫೦೦ರ ವರೆಗೆ ಬಂಡವಲುಳ್ಳವರು ಖಣ, ರುಮಾಲ, ನೂಲು, ರೇಶಿಮೆ, ಉಪ್ಪು, ಮೆಣಸಿನ ಕಾಯಿ, ಕಿರಾಣಿ, ಕಬ್ಬಿಣ, ಮುಂತಾದವುಗಳನ್ನು ಹೊರಗೆ ಕಳಿಸುವರು; ಮೇಲೆ ಹೇಳಿದ ಧ್ಯಾನ್ಯಗಳನ್ನೂ ಹೊರಗೆ ಕಳಿಸುವರು.

ವಿಜಾಪುರ ತಾಲೂಕಿನಲ್ಲಿ ವಿಜಾಪುರ, ಕನ್ನೂರು, ಬಬ್ಲಾದ, ಮಮದಾಪುರ, ತಿಂದಗಿ, ಈ ಗ್ರಾಮಗಳಲ್ಲಿ ಸಂತೆಗಳಾಗುವವು. ವಿಜಾಪುರ ವೊಂದೇ ವ್ಯಾಪಾರದ ಮುಖ್ಯ ಗ್ರಾಮ; ಇದರಲ್ಲಿ ೧೦೦೦ದಿಂದ ೩ ಲಕ್ಷ ವರೆಗೆ ಬಂಡವಲುಳ್ಳವರು ೨೫೦ ಜನ ವ್ಯಾಪಾರಸ್ಥರು ವಿಲಾಯತಿಯ ವಸ್ತ್ರ ಮುಂತಾದ ಸರಕುಗಳನ್ನು ಮುಂಬಯಿಯಿಂದ ತರುವರು; ದೇಶೀ ವಸ್ತ್ರ, ಉಪ್ಪು, ಮೆಣಸಿನ ಕಾಯಿ, ಕಿರಾಣಿ, ತೆಂಗಿನ ಕಾಯಿ, ಮುಂತಾದವುಗಳನ್ನು ಅಥಣಿ, ಬೆಳಗಾವಿ, ಸೊಲ್ಲಾಪುರ, ಹುಬ್ಬಳ್ಳಿ, ಮುಂತಾದ ಕಡೆಯಿಂದ ತರುವರು; ಧಾನ್ಯಗಳನ್ನೂ ಅರಳೆಯನ್ನೂ ಹೊರಗೆ ಕಳಿಸುವರು.

ಮುದ್ದೇಬಿಹಾಳ ತಾಲೂಕಿನಲ್ಲಿ ನಾಲತವಾಡ, ತಾಳೀಕೋಟೆ, ಹಿರೇಮುರಾಳ, ಮುದ್ದೇಬಿಹಾಳ, ಢವಳಿಗಿ, ತುಂಬಗಿ, ಈ ಗ್ರಾಮಗಳಲ್ಲಿ ಸಂತೆಗಳಾಗುವವು. ವ್ಯಾಪಾರದ ಮುಖ್ಯ ಗ್ರಾಮಗಳಾದ ಮುದ್ದೇಬಿಹಾಳ, ನಾಲತವಾಡ, ತಾಳೀಕೋಟೆ, ಇವುಗಳಲ್ಲಿ ಕೂಡಿ ೫೦೦೦ದಿಂದ ೨ ಲಕ್ಷದ ವರೆಗೆ ಬಂಡವಲುಳ್ಳ ೬೦ ಜನ ವ್ಯಾಪಾರಸ್ಥರು ವಿಲಾಯತೀ ದೇಶೀ ವಸ್ತ್ರಗಳು, ಅಕ್ಕಿ, ಬೆಲ್ಲ, ಸಕ್ಕರಿ, ಕಿರಾಣಿ, ಉಪ್ಪು, ಮುಂತಾದವುಗಳನ್ನು ಹೊರಗಿಂದ ತರುವರು; ಧಾನ್ಯ, ಅರಳೆಗಳನ್ನು ಹೊರಗೆ ಕಳಿಸುವರು.

ಬಾಗಲಕೋಟೆಯ ತಾಲೂಕಿನಲ್ಲಿ ಬಾಗಲಕೋಟೆ, ಕಲಾದಗಿ, ಮುಂತಾದ ಗ್ರಾಮಗಳಲ್ಲಿ ಸಂತೆಗಳಾಗುತ್ತವೆ. ಬಾಗಲಕೋಟೆ ವೊಂದೇ ವ್ಯಾಪಾರದ ಮುಖ್ಯ ಗ್ರಾಮವು. ಇದರಲ್ಲಿ ೫೦೦೦ದಿಂದ ೨ ಲಕ್ಷದ ವರೆಗೆ ಬಂಡವಲುಳ್ಳ ೨೨೫ ಜನ ವ್ಯಾಪಾರಸ್ಥರು ರೇಶಿಮೆ, ನೂಲು, ವಿಲಾಯತಿಯ ವಸ್ತ್ರ, ಬಂಗಾರ, ಬೆಳ್ಳಿ, ಮುತ್ತು, ನೀಲಿ, ಕುಸಂಬಿ, ಕಿರ್ಮಂಜಿ, ಕಿರಾಣಿ, ಹೊರಗಿಂದ ತರುತ್ತಾರೆ; ಧಾನ್ಯ, ಅರಳೆಗಳನ್ನು ಹೊರಗೆ ಕಳಿಸುತ್ತಾರೆ. ಬಾಗಲಕೋಟೆಯು ವಿಜಾಪುರ ಜಿಲ್ಲೆಯಲ್ಲಿ ಯೆಲ್ಲಕ್ಕೂ ದೊಡ್ಡ ಪೇಟೆ ಇರುತ್ತದೆ.

ಬಾದಾವೀ ತಾಲೂಕಿನಲ್ಲಿ ಬಾದಾವಿ, ಗೋವನಕೊಪ್ಪ, ಹೆಬ್ಬಾಳ, ಕೆರೂರು, ಗುಳೇದಗುಡ್ಡ, ನೀಲಗುಂದ, ಬೇಲೂರು, ಗಜೇಂದ್ರಗಡ, ಮುದಕವ್ವಿ, ಈ ಗ್ರಾಮಗಳಲ್ಲಿ ಸಂತೆಗಳಾಗುತ್ತವೆ. ಬೆಲೂರು, ಗಜೇಂದ್ರಗಡ, ಬಾದಾವಿ, ಗುಳೆದಗುಡ್ಡ, ಕೆರೂರು, ಈ ೫ ವ್ಯಾಪಾರದ ಮುಖ್ಯ ಗ್ರಾಮಗಳಲ್ಲಿ ಕೂಡಿ ೨೩೫ ಜನ ವ್ಯಾಪಾರಸ್ಥರು ೫೦೦೦ದಿಂದ

೨ ಲಕ್ಷದ ವರೆಗೆ ಬಂಡವಲುಳ್ಳವರು ರೇಶಿಮೆ, ನೂಲು, ವಸ್ತ್ರ, ನೀಲಿ, ಅಕ್ಕಿ, ಬೆಲ್ಲ, ಉಪ್ಪು, ಯೆಣ್ಣೆ, ಅಡಿಕೆ, ತೆಂಗಿನ ಕಾಯಿ, ಕಿರಾಣಿ, ಮುಂತಾದವುಗಳನ್ನು ಹೊರಗಿಂದ ತರುತ್ತಾರೆ; ಖಣ, ಖಾದಿ, ಶೀರೆ, ಧಾನ್ಯ, ಅರಳೆ, ಮುಂತಾದವುಗಳನ್ನು ಹೊರಗೆ ಕಳಿಸುತ್ತಾರೆ.

ಹುನಗುಂದ ತಾಲೂಕಿನಲ್ಲಿ ಕಂದಗಲ್ಲು, ಕರಡಿ, ಇಲಕಲ್ಲು, ಗುಡೂರು, ಹುನಗುಂದ, ಕಮತಿಗಿ, ಅಮೀನಗಡ, ಈ ಗ್ರಾಮುಗಳಲ್ಲಿ ಸಂತೆಗಳಾಗುತ್ತವೆ. ಇಲಕಲ್ಲು, ಅಮೀನಗಡ, ಈ ಯೆರಡು ವ್ಯಾಪಾರದ ಮುಖ್ಯ ಗ್ರಾಮುಗಳಲ್ಲಿ ಕೂಡಿ ೫೦೦೦ದಿಂದ ೧ ಲಕ್ಷ ೫೦ ಸಾವಿರದ ವರೆಗೆ ಬಂಡವಲುಳ್ಳ ೫೦೦ ಜನ ವ್ಯಾಪಾರಸ್ಥರು ವಿಲಾಯತಿಯ ವಸ್ತ್ರ, ನೂಲು, ರೇಶಿಮೆ, ನೀಲಿ, ಅಕ್ಕಿ, ಬೆಲ್ಲ, ಉಪ್ಪು, ಮೆಣಸಿನ ಕಾಯಿ, ಕಿರಾಣಿ, ತೆಂಗಿನ ಕಾಯಿ, ಯೆಣ್ಣೆ, ಮುಂತಾದವುಗಳನ್ನು ಹೊರಗಿಂದ ತರುತ್ತಾರೆ; ಅರಳೆಯನ್ನು ಹೊರಗೆ ಕಳಿಸುತ್ತಾರೆ.

ಬಾಗೇವಾಡೀ ತಾಲೂಕಿನಲ್ಲಿ ಬಾಗೇವಾಡಿ, ಕೊಲ್ಹಾರ, ಗೊಳಸಂಗಿ, ಉಕ್ಕಲಿ, ವಂದಲ, ಮನಗೋಳಿ, ನಿಡಗುಂದಿ, ಹೂವಿನ ಹಿಪ್ಪರಿಗಿ, ಈ ಗ್ರಾಮುಗಳಲ್ಲಿ ಸಂತೆಗಳಾಗುತ್ತವೆ. ಈ ತಾಲೂಕಿನಲ್ಲಿ ವ್ಯಾಪಾರವು ಬಹಳ ನಡಿಯುವದಿಲ್ಲವಾದಾಗ್ಯೂ ಸುಮಾರು ೨೦೫ ಜನ ವ್ಯಾಪಾರಸ್ಥರು ೨೦೦ರಿಂದ ೫೦೦೦ದ ವರೆಗೆ ಬಂಡವಲುಳ್ಳವರು ವಸ್ತ್ರ, ಅಕ್ಕಿ, ಬೆಲ್ಲ, ಕಿರಾಣಿ, ಮುಂತಾದವುಗಳನ್ನು ಹೊರಗಿಂದ ತರುತ್ತಾರೆ; ಧಾನ್ಯ, ಅರಳೆಗಳನ್ನು ಹೊರಗೆ ಕಳಿಸುತ್ತಾರೆ.

**ಬೆಳಗಾವಿ ಜಿಲ್ಲೆ.**

ಬೆಳಗಾವೀ ತಾಲೂಕಿನಲ್ಲಿ ಬೆಳಗಾವಿ, ಬಾಗೇಶ್ವರಿ, ಪಾಟನಾ, ಈ ಗ್ರಾಮುಗಳಲ್ಲಿ ಸಂತೆಗಳಾಗುತ್ತವೆ. ಬೆಳಗಾವಿಯೊಂದೇ ವ್ಯಾಪಾರದ ಮುಖ್ಯ ಗ್ರಾಮುವು. ಇಲ್ಲಿ ೨೫೦ ಜನ ವ್ಯಾಪಾರಸ್ಥರು ೫೦೦೦ದಿಂದ ೨ ಲಕ್ಷದ ವರೆಗೆ ಬಂಡವಲುಳ್ಳವರು ಇಮಾರತಿಯ ಕಟ್ಟಿಗೆ, ವಿಲಾಯತಿಯ ವಸ್ತ್ರ ಮುಂತಾದ ಸರಕುಗಳು, ಕಬ್ಬಿಣದ ಸಾಮಾನು, ಪಾತ್ರೆಗಳು, ಉಪ್ಪು, ತೆಂಗಿನ ಕಾಯಿ, ಮುಂತಾದವುಗಳನ್ನು ಹೊರಗಿಂದ ತರುತ್ತಾರೆ; ಅಕ್ಕಿ ಮುಂತಾದ ಧಾನ್ಯ, ದೇಶೀ ವಸ್ತ್ರ, ಮುಂತಾದವುಗಳನ್ನು ಹೊರಗೆ ಕಳಿಸುತ್ತಾರೆ.

ಬೆಳಗಾವಿಯ ಹತ್ತರ ಸಾಂಗಲೀ ಸಂಸ್ಥಾನಕ್ಕೆ ಶೇರಿದ ಶಹಾಪುರದಲ್ಲಿ ಲಕ್ಷಾಧಿಪತಿಗಳು ಬಹು ಜನರುಂಟು. ಶಹಾಪುರದ ಪೇಟೆಯಲ್ಲಿ ಆ ಊರಲ್ಲಿ ಹುಟ್ಟಿದ ವಸ್ತ್ರಗಳು, ನಾಗಪುರ, ಪೈಠಣ, ಮುಂತಾದ ಕಡೆಯಲ್ಲಿಯ ಬೆಲೆಯುಳ್ಳ ವಸ್ತ್ರಗಳು, ತಾಮ್ರದ ಪಾತ್ರೆಗಳು, ಮತ್ತು ಬೆಳ್ಳಿ, ಬಂಗಾರ, ಇವುಗಳ ವ್ಯಾಪಾರವು ಬಹಳ ನಡಿಯುತ್ತದೆ.

ಸಂಪಗಾವಿಯ ತಾಲೂಕಿನಲ್ಲಿ ಸಂಪಗಾವಿ, ಬೈಲಹೊಂಗಲ, ಕಿತ್ತೂರು, ಈ ಗ್ರಾಮುಗಳಲ್ಲಿ ಸಂತೆಗಳಾಗುತ್ತವೆ. ಬೈಲಹೊಂಗಲ ವೊಂದೇ ವ್ಯಾಪಾರದ ಮುಖ್ಯ ಗ್ರಾಮು. ಅಲ್ಲಿ ೫೦೦೦ದಿಂದ ೧ ಲಕ್ಷದ ವರೆಗೆ ಬಂಡವಲುಳ್ಳ ೩೦ ಜನ ಲಿಂಗವಂತ ವ್ಯಾಪಾರಸ್ಥರು ರೇಶಿಮೆ, ನೂಲು, ವಸ್ತ್ರ, ಖಣ, ಅಡಿಕೆ, ನೀಲಿ, ಇವುಗಳನ್ನು ಹೊರಗಿಂದ ತರುತ್ತಾರೆ; ಅರಳೆಯನ್ನು ಹೊರಗೆ ಕಳಿಸುತ್ತಾರೆ.

ಖಾನಾಪುರ ತಾಲೂಕಿನಲ್ಲಿ ಖಾನಾಪುರ, ನಂದಗಡ ಈ ಯೆರಡು ಗ್ರಾಮುಗಳಲ್ಲಿ ಸಂತೆಗಳಾಗುತ್ತವೆ. ನಂದಗಡದಲ್ಲಿ ೫೦೦೦ದಿಂದ ೩ ಲಕ್ಷದ ವರೆಗೆ ಬಂಡವಲುಳ್ಳ ೩೦ ಜನ ವ್ಯಾಪಾರಸ್ಥರು ತೆಂಗು, ಅಡಿಕೆ, ಕೊಬ್ಬರೀ ಯೆಣ್ಣೆ, ಉಪ್ಪು, ಉತ್ತತ್ತಿ, ಮುಂತಾದ ವುಗಳನ್ನು ಹೊರಗಿಂದ ತರುತ್ತಾರೆ; ನಂದಗಡದಿಂದ ಹೊರಗೆ ಮಾಲು ಬಹುತರ ಹೋಗುವದಿಲ್ಲ.

ಪರಸಗಡ ತಾಲೂಕಿನಲ್ಲಿ ಸವದತ್ತಿ, ಮುರಗೋಡ, ಮುಂತಾದ ೫೦ ಗ್ರಾಮುಗಳಲ್ಲಿ ಸಂತೆಗಳಾಗುತ್ತವೆ. ಸವದತ್ತಿ, ಮುರಗೋಡ, ಈ ಗ್ರಾಮುಗಳಲ್ಲಿ ವ್ಯಾಪಾರವು ಬಹಳ ನಡಿಯುತ್ತದೆ.

ಇದರಂತೆ ಚಿಕ್ಕೋಡಿ, ಗೋಕಾವಿ, ಅಥಣಿ, ಈ ತಾಲೂಕುಗಳಲ್ಲಿಯೂ ಸಂತೆಗಳು ಬಹಳ ಗ್ರಾಮುಗಳಲ್ಲಿ ಆಗುತ್ತವೆ. ಅಲ್ಪ ಸ್ವಲ್ಪ ಬಂಡವಲುಳ್ಳಂಥ ವ್ಯಾಪಾರಸ್ಥರು ಬಹಳ ಕಡೆಯಲ್ಲಿ ಇದ್ದಾರೆ. ಈ ಮೂರು ತಾಲೂಕುಗಳಲ್ಲಿ ಹೆಸರಾದ ವ್ಯಾಪಾರದ ಗ್ರಾಮುಗಳನ್ನು ಮಾತ್ರ ಕೆಳಗೆ ವಿವರಿಸುತ್ತೇವೆ.

ಚಿಕ್ಕೋಡೀ ತಾಲೂಕಿನಲ್ಲಿ ನಿಪಾಣಿ, ಶಂಕೇಶ್ವರ, ಈ ಯೆರಡು ಮುಖ್ಯ ಗ್ರಾಮುಗಳಲ್ಲಿ ಕೂಡಿ ೧೫೦ ಜನ ವ್ಯಾಪಾರಸ್ಥರು ೫೦೦೦ದಿಂದ ೨೫೦೦೦ದ ವರೆಗೆ ಬಂಡವಲುಳ್ಳವರು ಅಡಿಕೆ, ಕೊಬ್ಬರಿ, ಯಾಲಕ್ಕಿ, ಮೆಣಸು, ಉಪ್ಪು, ತೆಂಗಿನಕಾಯಿ, ಉತ್ತತ್ತಿ, ತಾಮ್ರದ ತಗಡು, ತಾಮ್ರ ಹಿತ್ತಾಳಿಗಳ ಪಾತ್ರೆಗಳು, ವಸ್ತ್ರ, ಕಾಜು, ಜಾಜೀಕಾಯಿ, ಪತ್ರಿ, ಲವಂಗ, ಇವುಗಳನ್ನು ಹೊರಗಿಂದ ತರುತ್ತಾರೆ; ಅರಳೆ, ಬೆಲ್ಲ, ತಂಬಾಕ, ಮೆಣಸಿನಕಾಯಿ, ನಾರು, ದೇಶೀ ವಸ್ತ್ರ, ಇವುಗಳನ್ನು ಹೊರಗೆ ಕಳಿಸುತ್ತಾರೆ.

ಗೋಕಾವಿಯಲ್ಲಿ ೩೦ ಜನ ವ್ಯಾಪಾರಸ್ಥರು ೧೦೦೦೦ದಿಂದ ೨ ಲಕ್ಷದ ವರೆಗೆ ಬಂಡವಲುಳ್ಳವರು ರೇಶಿಮೆ, ನೂಲು, ವಸ್ತ್ರ, ಖಣ, ಅಕ್ಕಿ, ಗಾಂಜೆ, ಮುಂತಾದವುಗಳನ್ನು ಹೊರಗಿಂದ ತರುತ್ತಾರೆ; ಶೀರೆ, ಅರಳೆ, ಧಾನ್ಯ, ಬಣ್ಣದ ಸಾಮಾನುಗಳು, ಇವುಗಳನ್ನು ಹೊರಗೆ ಕಳಿಸುತ್ತಾರೆ.

ಅಥಣಿಯಲ್ಲಿ ೨೫೦೦೦ದಿಂದ ೧ ಲಕ್ಷದ ವರೆಗೆ ಬಂಡವಲುಳ್ಳ ೩೦ ಜನ ವ್ಯಾಪಾರಸ್ಥರು ಸಕ್ಕರೆ, ಉತ್ತತ್ತಿ, ತಟ್ಟಿನ ಚೀಲು, ಉಪ್ಪು, ಇವುಗಳನ್ನು ಹೊರಗಿಂದ ತರುತ್ತಾರೆ; ಅರಳೆ, ಧಾನ್ಯ, ತುಪ್ಪ, ಇವುಗಳನ್ನು ಹೊರಗೆ ಕಳಿಸುತ್ತಾರೆ.

**ಧಾರವಾಡ ಜಿಲ್ಲೆ.**

ಧಾರವಾಡ ಜಿಲ್ಲೆಯಲ್ಲಿ ಧಾರವಾಡದಲ್ಲಿಯೂ ಹುಬ್ಬಳ್ಳಿಯಲ್ಲಿಯೂ ವೊಂದೊಂದು ವ್ಯಾಪಾರದ ಕಂಪನಿಗಳಿವೆ. ಧಾರವಾಡದ ಕಂಪನಿಯ ಬಂಡವಲು ಸುಮಾರು ೩೭೦೦೦ ಇರುತ್ತದೆ; ಹುಬ್ಬಳ್ಳಿಯ ಕಂಪನಿಯದು ೨೨೦೦೦ ಇರುತ್ತದೆ. ಈ ಯೆರಡೂ ಕಂಪನಿಗಳು ವಿಲಾಯತೀ ದೇಶೀ ವಸ್ತ್ರಗಳ ವ್ಯಾಪಾರ ಮಾಡುತ್ತವೆ. ಈ ಕಂಪನಿಗಳು ಭಾಗೀದಾರರಿಗೆ ವರ್ಷಕ್ಕೆ ಶೇಕಡಾ ೬ ರೂಪಾಯಿಯಂತೆ ಲಾಭವನ್ನು ಸರಾಸರೀ ಮಾನದಿಂದ ಕೊಡುತ್ತವೆ. ಆದರೆ ಆರಂಭದಲ್ಲಿ ವರ್ಷಕ್ಕೆ ಶೇಕಡಾ ೧೫ರಂತೆ ಸ್ವಲ್ಪ ದಿವಸ ದೊರಿಯುತ್ತಿತ್ತು.

ಧಾರವಾಡ ಜಿಲ್ಲೆಯಲ್ಲಿ ವ್ಯಾಪಾರದ ಮುಖ್ಯ ಗ್ರಾಮಗಳೆಂದರೆ ಪಡಮೂಲೆಗಳು ಹತ್ತು ಇರುತ್ತವೆ. ಅವುಗಳಲ್ಲಿ ಹುಬ್ಬಳ್ಳಿ, ಧಾರವಾಡ, ನವಲಗುಂದ, ಗದಗು, ರಾಣೀ ಬಿನ್ನೂರು, ಈ ಐದು ಗ್ರಾಮುಗಳಲ್ಲಿ ಥೋಕ ಮಾರಾಟ, ಕಿರುಕುಳ ಮಾರಾಟ, ಈ ಯೆರಡೂ ಪ್ರಕಾರ ವ್ಯಾಪಾರ ನಡಿಯುತ್ತದೆ. ಇವುಗಳ ಜೊತೆರ್ಯ ಗದಗ ತಾಲೂಕಿನಲ್ಲಿ ಮುಂಡರಗಿ, ರಾಣೀಬಿನ್ನೂರು ತಾಲೂಕಿನಲ್ಲಿ ಬ್ಯಾಡಿಗಿ, ಕರ್ಜಗೀ ತಾಲೂಕಿನಲ್ಲ ಹಾ ವೇರಿ, ಬಂಕಾಪುರ ತಾಲೂಕಿನಲ್ಲಿ ಧುಂಡಸಿ, ನವಲಗುಂದ ತಾಲೂಕಿನಲ್ಲಿ ನರಗುಂದ, ಈ ಐದು ಗ್ರಾಮುಗಳಲ್ಲಿ ಥೋಕ ಮಾರಾಟದ ವ್ಯವಹಾರ ಮಾತ್ರ ನಡಿಯುತ್ತದೆ. ಈ ಹತ್ತು ಪಡಮೂಲೆಗಳಲ್ಲಿ ಹುಬ್ಬಳ್ಳಿ, ಗದಗು, ಯೆಲ್ಲಕ್ಕೂ ಶ್ರೇಷ್ಠವಿರುತ್ತವೆ.

**ಹುಬ್ಬಳ್ಳಿ.**

ಬೆಳಗಾವಿಯಿಂದ ವೆಂಗುರ್ಲೆಗೆ ಲೈನ ಮಾರ್ಗವಾಗುವ ಪೂರ್ವದಲ್ಲಿ ಈ ಕರ್ನಾಟಕ ಶೀಮೆಯಲ್ಲಿ ಹುಬ್ಬಳ್ಳಿಯು ಯೆಲ್ಲಕ್ಕೂ ಹೆಚ್ಚಿನ ಪೇಟೆಯನಿಸುತ್ತಿತ್ತು. ಈಗ ಬೆಳಗಾವಿಯ ತರುವಾಯ ಹುಬ್ಬಳ್ಳಿಯು ಯೆಣಿಸಲ್ಪಡುತ್ತದೆ. ಹುಬ್ಬಳ್ಳಿಯಲ್ಲಿ ಸುಮಾರು ೭೦೦ ಜನ ವ್ಯಾಪಾರಸ್ಥರುಂಟು. ಇವರಲ್ಲಿ ೩೦೦ ಜನರ ಬಂಡವಲು ೫೦೦೦ದಿಂದ ೧ ಲಕ್ಷದ ವರೆಗೆ ಇರುತ್ತದೆ. ಇವರು ಮುಂಬಯಿಯ ನೂಲು, ರೇಶಿಮೆ, ಕಸ್ತೂರಿ, ಕೇಶರ, ಚಿಮನೀ ಯೆಣ್ಣೆ, ಅರಿಶಿಣ ಬೇರು, ದೇಶೀ ವಿಲಾಯತೀ ವಸ್ತ್ರ, ಜೀರಿಗೆ, ತೆಂಗಿನ ಕಾಯಿ, ಕೊಬ್ಬರಿ, ಗಾಂಜಿ, ಸಕ್ಕರೆ, ಬೆಲ್ಲ, ಕಂಬಳಿ, ಮೆಣಶಿನಕಾಯಿ, ತಂಬಾಕ, ಅಡಿಕೆ, ಯಾಲಕ್ಕಿ, ಮೆಣಸು, ಮುಂತಾದವುಗಳನ್ನು ಹೊರಗಿಂದ ತರುತ್ತಾರೆ; ಅರಳೆ, ಕುಶಿಬೆ, ಶೀರೆ, ಖಣ ಮುಂತಾದ ದೇಶೀ ವಸ್ತ್ರ, ತಾಮ್ರ ಹಿತ್ತಾಳಿಗಳ ಪಾತ್ರೆಗಳು, ಹುಣಚೀ ಹಣ್ಣು, ಉಳ್ಳೇಗಡ್ಡೆ, ಬೆಳ್ಳುಳ್ಳಿ, ಮುಂತಾದವುಗಳನ್ನು ಹೊರಗೆ ಕಳಿಸುತ್ತಾರೆ.

**ಗದಗು.**

ಗದಗಿನಲ್ಲಿ ವೊಂಬತ್ತು ಜನ ಪ್ರಮುಖ ವ್ಯಾಪಾರಸ್ಥರು ೫೦೦೦ದಿಂದ ೨ ಲಕ್ಷದ ವರೆಗೆ ಬಂಡವಲುಳ್ಳವರು ವಿಲಾಯತಿಯ ವಸ್ತ್ರ, ನೂಲು, ರೇಶಿಮೆ, ಮುಂತಾದವುಗಳನ್ನು ಹೊರಗಿಂದ ತರುವರು; ಅರಳೆ, ದೇಶೀ ವಸ್ತ್ರ, ಮುಂತಾದವುಗಳನ್ನು ಪರಪೇಟೆಗೆ ಕಳಿಸುವರು.

**ಬ್ಯಾಡಗಿ ಮುಂಡರಗಿ.**

ಬ್ಯಾಡಗಿಯಲ್ಲಿ ಅಕ್ಕಿ, ಜೋಳ, ಗೋಧಿ, ತೊಗರಿ, ಬೆಲ್ಲ, ಸಕ್ಕರೆ, ಮೆಣಶಿನಕಾಯಿ, ಅಡಿಕೆ, ಕೊಬ್ಬರಿ, ತೆಂಗಿನಕಾಯಿ, ಮುಂತಾದ ಸರಕುಗಳು ಮೈಸೂರ ಶೀಮೆಯಿಂದಲೂ ಕಾನಡಾ ಜಿಲ್ಲೆಯಿಂದಲೂ ಬಂದು ಥೋಕ ಮಾರಾಟದಿಂದ ಪರ ಪೇಟೆಗಳಿಗೆ ಹೋಗುತ್ತವೆ. ಇದೇ ಮೇರೆಗೆ ಮುಂಡರಗಿಯಲ್ಲಿ ಬಳ್ಳಾರಿಯಿಂದಲೂ ನಿಜಾಮನ ರಾಜ್ಯದಿಂದಲೂ ಸದರೀ ಸರಕುಗಳು ಬಂದು, ಅಲ್ಲಿಂದ ಪರಪೇಟೆಗಳಿಗೆ ಹೋಗುತ್ತವೆ.

ಹಾವೇರಿಯಲ್ಲಿ ೧೦೦೦ದಿಂದ ೫೦೦೦೦ದ ವರೆಗೆ ಬಂಡವಲುಳ್ಳ ೨೫ ಜನ ವ್ಯಾಪಾರಸ್ಥರು ಮುಖ್ಯವಾಗಿ ಕಾನಡಾ ಜಿಲ್ಲೆಯಿಂದಲೂ ಮೈಸೂರು ಶೀಮೆಯಿಂದಲೂ ಬರುವ ಯಾಲಕ್ಕಿ, ಅಡಿಕೆ, ಮೆಣಸುಗಳನ್ನು ಕೊಂಡು ದೂರದೂರದ ವ್ಯಾಪಾರಸ್ಥರಿಗೆ ಮಾರುತ್ತಾರೆ.

ಹಾವೇರಿಯಲ್ಲಿ ಸೌಳು ನೀರಿನದೊಂದು ಭಾವಿಯುಂಟು. ಅದರ ನೀರೊಳಗೆ ಶೀಗೀಕಾಯಿ, ಅಂಟಾಳ ಕಾಯಿಗಳನ್ನು ಹಾಕಿ ಅದರಿಂದ ಯಾಲಕ್ಕಿಗಳನ್ನು ತೊಳಿದು, ಆ ಮೇಲೆ ಸ್ವಚ್ಛ ನೀರಿನಿಂದ ತೊಳಿದು ಒಣಗಿಸುತ್ತಾರೆ. ಅದರಿಂದ ಯಾಲಕ್ಕಿಗಳು ಉಬ್ಬಿ ಬೆಳ್ಳಗಾಗುತ್ತವೆ. ಅಡಿಕೆಯ ವ್ಯಾಪಾರವು ಹಾವೇರಿಯಲ್ಲಿ ವರ್ಷಕ್ಕೆ ಸುಮಾರು ೧೫೦೦೦೦ ರೂಪಾಯಿಯ ವರೆಗೆ ಆಗುತ್ತದೆ. ಅಡಿಕೆಯಲ್ಲಿ ಚಿಕಣೀ ಉತ್ತಮ, ಮಧ್ಯಮ, ಬರಡೀ ಉತ್ತಮ, ಮಧ್ಯಮ, ಈ ಪ್ರಕಾರ ನಾಲ್ಕು ಬೇರೆ ಬೇರೆ ಪ್ರಕಾರಗಳನ್ನು ವಿಂಗಡಿಸಿ, ಬೇರೆ ಬೇರೆ ದರದಿಂದ ಮಾರುವರು. ಇದಲ್ಲದೆ ೫ ಪ್ರಕಾರದ ಕೊರಿದ ಅಡಿಕೆಯ ಮಾರಾಟವಾಗುತ್ತದೆ. ಕೇಶರದಂತೆ ಬಹು ಜಿಣುಗಾಗಿ ಕೊರಿದ ಚಿಕಣೀ ಚೂರುಗಳಿಗೆ ಕೇಶರೀ ಚೂರೆನ್ನುವರು; ಕಡ್ಡಿಯಂತೆ ಸ್ವಲ್ಪ ದಪ್ಪಾಗಿ ಕೊರಿದ ಚೂರುಗಳಿಗೆ ಕಡ್ಡೀ ಚೂರೆನ್ನುವರು; ಲವಂಗದಪ್ಪು ದಪ್ಪಾಗಿ ಕೊರಿದ ಚೂರುಗಳಿಗೆ ಲವಂಗ ಚೂರೆನ್ನುವರು; ತೆಳ್ಳಗಿನ ಹಲಿಪೆಗಳಾಗಿ ಕೊರಿದ ಚೂರುಗಳಿಗೆ ನರೇಗಲ್ಲ ಅಡಿಕೆಯನ್ನುವರು; ಒಂದು ಬರಡೀ ಅಡಿಕೆಯೊಳಗೆ ಯೆರಡು ಹೋಳುಗಳಾಗಿ ಕೊರಿದ ಚೂರುಗಳಿಗೆ ಬಟ್ಟಲ ಚೂರುಗಳೆಂದೆನ್ನುವರು. ಮೆಣಸಿನ ವ್ಯಾಪಾರವು ಸುಮಾರು ೪೦೦ ಪೌಂಡಿನ ವರೆಗೆ ಸಂತೆಯ ದಿವಸ ಆಗುತ್ತದೆ.

**ಧುಂಡಸಿ.** ಧುಂಡಸಿಯಲ್ಲಿ ಸುಮಾರು ೭೫೦ ಜನ ವ್ಯಾಪಾರಸ್ಥರು ೧೦೦೦ದಿಂದ ೫೦೦೦೦ದ ವರೆಗೆ ಬಂಡವಲುಳ್ಳವರು ತೆಂಗಿನ ಕಾಯಿ, ಅಡಿಕೆ, ಕೊಬ್ಬರಿ, ಬೆಲ್ಲ, ಸಕ್ಕರಿ, ಮೆಣಸು, ಉಪ್ಪು, ಯೆಣ್ಣೆ, ತಂಬಾಕ, ಮುಂತಾದವುಗಳನ್ನು ಕೊಂಡು ಪರ ಪೇಟೆಗಳಿಗೆ ಕಳಿಸುತ್ತಾರೆ.

**ನರಗುಂದ.** ಸನ್ ೧೮೫೭ರಲ್ಲಿ ನರಗುಂದದ ಸಂಸ್ಥಾನಿಕನು ಬಂಡಾಯ ಮಾಡುವ ವರೆಗೆ ನರಗುಂದವು ಈ ಜಿಲ್ಲೆಯಲ್ಲಿ ೧ನೇ ಪ್ರತಿಯ ಪಡಮೂಲೆ ಯೆನಿಸುತ್ತಿತ್ತು. ಆ ವರ್ಷದಿಂದಿತ್ತ ಈ ಪೇಟೆಯ ವ್ಯಾಪಾರವು ಬಹಳ ಹಿಮ್ಮೆಟ್ಟಿತು. ಆದರೂ ಇನ್ನೂ ಠೋಕ ಮಾರಾಟದ ವ್ಯಾಪಾರವು ತಕ್ಕಮಟ್ಟಿಗೆ ನಡಿಯುತ್ತದೆ.

**ಸಂತೆಗಳು.** ಹಿಂದೆ ಹೇಳಿದ ೧೦ ಪಡಮೂಲೆಗಳಲ್ಲಿ ಅಲ್ಲದೆ ಮಾಮಲೇದಾರರ ಕಚೇರಿ, ಮುನಸೀಪರ ಕಚೇರಿ ಇರುವ ಗ್ರಾಮಗಳಲ್ಲಿಯೂ, ಪರಗಣೆ, ಮಹಾಲು, ತರಫ, ಕರ್ಯಾತ, ಯೆಂಬ ಬುನಾದಿಯ ವಿಭಾಗಗಳ ಮುಖ್ಯ ಗ್ರಾಮಗಳಲ್ಲಿಯೂ ವಾರ ವಾರಕ್ಕೆ ಸಂತೆಯಾಗುತ್ತದೆ. ಈ ಸಂತೆಗಳಲ್ಲಿ ೧೦೦೦ದಿಂದ ೧೦೦೦೦ದ ವರೆಗೆ ಜನ ಕೂಡುತ್ತದೆ.

**ಕಾನಡಾ.** ಕಾನಡಾ ಜಿಲ್ಲೆಯ ಸಮುದ್ರತೀರದಲ್ಲಿ ವ್ಯಾಪಾರದ ಮುಖ್ಯ ಸ್ಥಳಗಳು—ಕಾರವಾಡ ತಾಲೂಕಿನಲ್ಲಿ ಕಾರವಾಡ, ಸದಾಶಿವಗಡ, ಚಂಡಿಯಾ, ಬಿಂಘೆ; ಅಂಕೋಲಾ ತಾಲೂಕಿನಲ್ಲಿ ಅಂಕೋಲಾ, ಬೆಲೀಕೇರಿ, ಗಂಗಾವಳಿ; ಕುಮಟಾ ತಾಲೂಕಿನಲ್ಲಿ ಕುಮಟಾ, ತದಡಿ, ಗೋಕರ್ಣ; ಹೊನ್ನಾವರ

ತಾಲೂಕಿನಲ್ಲಿ ಹೊನ್ನಾವರ, ಮಂಕಿ, ಮುರಡೇಶ್ವರ, ಶಿರಾಳಿ, ಭಟಕಳ. ಘಟ್ಟದ ಮೇಲೆ ವ್ಯಾಪಾರದ ಮುಖ್ಯ ಸಳಗಳು — ಸುಪೆ ತಾಲೂಕಿನಲ್ಲಿ ಯಲ್ಲಾಪುರ, ಮುಂಡಗೋಡ, ಮಳಿಗಿ, ಪಾಳೆ; ಸಿರಶೀ ತಾಲೂಕಿನಲ್ಲಿ ಸಿರಶಿ, ಬನವಾಸಿ, ಸ್ವಾದೆ; ಸಿದ್ದಾಪುರ ತಾಲೂಕಿನಲ್ಲಿ ಸಿದ್ದಾಪುರ, ಗೆರಸಪ್ಪೆ, ಬೀಳಗಿ. ಘಟ್ಟದ ಕೆಳಗೆ ಕೊಂಕಣಿಗರು, ಸಾಷ್ಟೀಕರರು, ಗುಜ್ಜರು ಮುಖ್ಯ ವ್ಯಾಪಾರಸ್ಥರೆನಿಸುತ್ತಾರೆ. ಘಟ್ಟದ ಮೇಲೆ ಲಿಂಗವಂತರೇ ಪ್ರಮುಖರಾಗಿದ್ದಾರೆ.

**ಜಾತ್ರೆಗಳು.**

**ಜಾತ್ರೆಗಳು.** — ವಿಜಾಪುರ ಜಿಲ್ಲೆಯಲ್ಲಿ ಸಣ್ಣ ದೊಡ್ಡ ಜಾತ್ರೆಗಳೆಲ್ಲ ಕೂಡಿ ೪೦ ಜಾತ್ರೆಗಳಾಗುತ್ತವೆ. ಇವುಗಳಲ್ಲಿ ೧೦೦೦ದಿಂದ ೫೦೦೦೦ದ ವರೆಗೆ ಜನ ಕೂಡುತ್ತದೆ; ೫೦ ರೂಪಾಯಿಯಿಂದ ೧ ಲಕ್ಷ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ. ನಿಂಬರಿಗಿ, ಹಿಪ್ಪರಿಗಿ, ಚೊಳಚ ಗುಡ್ಡ, ಗಜೇಂದ್ರಗಡ, ಸಂಗಮ, ಇಲಕಲ್ಲು, ಈ ಗ್ರಾಮಗಳಲ್ಲಿ ಆಗುವ ಜಾತ್ರೆಗಳು ಮುಖ್ಯವೆಂದು ಹೇಳ ಬಹುದು. ಇಲಕಲ್ಲಿನ ಜಾತ್ರೆಯಲ್ಲಿ ೫೦೦೦೦ ಜನ ಕೂಡುತ್ತದೆ; ಸಂಗಮದ ಜಾತ್ರೆಯಲ್ಲಿ ೬೦೦೦೦ ಜನ ಕೂಡುತ್ತದೆ.

ಬೆಳಗಾವೀ ಜಿಲ್ಲೆಯಲ್ಲಿ ವೊಟ್ಟಿಗೆ ೯ ಜಾತ್ರೆಗಳಾಗುತ್ತವೆ; ಅವುಗಳಲ್ಲಿ ೨೫೦೦ರಿಂದ ೬೦೦೦೦ದ ವರೆಗೆ ಜನ ಕೂಡಿ, ೨೦೦೦ದಿಂದ ೩೫೦೦೦ದ ವರೆಗೆ ವ್ಯಾಪಾರವಾಗುತ್ತದೆ. ಮುಖ್ಯ ಜಾತ್ರೆಗಳು — ಯೆಡೂರಲ್ಲಿ ವೀರಭದ್ರನ ಜಾತ್ರೆ ೧೦೦೦೦ ಜನ; ಶಂಕೇಶ್ವರದಲ್ಲಿ ಶಂಕರಲಿಂಗನ ಜಾತ್ರೆ ೨೫೦೦೦ ಜನ; ಉಗರಗೋಳ್ಳದಲ್ಲಿ ಯೆಲ್ಲಮ್ಮನ ಜಾತ್ರೆ ೬೦೦೦೦ ಜನ.

ಧಾರವಾಡ ಜಿಲ್ಲೆಯಲ್ಲಿ ಸಣ್ಣ ಪುಟ್ಟ ಜಾತ್ರೆಗಳು ಬಹಳ ಕಡೆಯಲ್ಲಿ ಆಗುತ್ತವೆ; ಯೆಲ್ಲಕ್ಕೂ ದೊಡ್ಡ ಜಾತ್ರೆಗಳು ಯಮನೂರು, ಗುಡ್ಡ ಗುಡ್ಡಾಪುರ, ಹುಲಗೂರು, ಈ ಮೂರು ಕಡೆಯಲ್ಲಿ ಆಗುತ್ತವೆ. ನವಲಗುಂದ ತಾಲೂಕಿಗೆ ಶೇರಿದ ಯಮನೂರಲ್ಲಿ ಇರುವ ಪೀರನ ಜಾತ್ರೆಯು ಮಾರ್ಚ ತಿಂಗಳಲ್ಲಿ ಆಗುತ್ತದೆ. ಈ ಜಾತ್ರೆಯ ನಾಲ್ಕು ದಿವಸಗಳಲ್ಲಿ ೫೦೦೦೦ ಜನ ಕೂಡಿ ಸುಮಾರು ೨೦೦೦ ರೂಪಾಯಿಯ ವ್ಯಾಪಾರವಾಗುತ್ತದೆ. ಗುಡ್ಡ ಗುಡ್ಡಾಪುರದಲ್ಲಿ ಮಲ್ಲಾರಿಯ ಜಾತ್ರೆಯು ನಾಲ್ಕು ದಿವಸವಾಗುತ್ತದೆ; ಅದರಲ್ಲಿ ಸುಮಾರು ೧೨೦೦೦೦ ಜನ ಕೂಡಿ ೮೦೦ ರೂಪಾಯಿಯ ವ್ಯಾಪಾರವಾಗುತ್ತದೆ. ಹುಲಗೂರಿನ ಪೀರನ ಜಾತ್ರೆಗೆ ಮೊದಲು (ಸನ್ನ ೧೮೬೦ರ ಪೂರ್ವದಲ್ಲಿ) ಸವಣೂರ ನಬಾಬನು ಹೋಗುತ್ತಿದ್ದಾಗ ಜಾತ್ರೆಯು ವೊಳಿತಾಗಿ ಆಗುತ್ತಿತ್ತು; ಆದರೆ ಈಗ ಅದರ ಭರತಿಯು ಮೊದಲಿನಷ್ಟು ಇರುವದಿಲ್ಲ.

ಕಾನಡಾ ಜಿಲ್ಲೆಯಲ್ಲಿ ಗೋಕರ್ಣ, ಸಿರಶಿ, ಉಳವಿ, ಈ ಮೂರು ಕಡೆಯಲ್ಲಿ ದೊಡ್ಡ ಜಾತ್ರೆಗಳಾಗುತ್ತವೆ. ಗೋಕರ್ಣದಲ್ಲಿ ಶಿವರಾತ್ರಿಯಲ್ಲಿಯೂ ಕಾರ್ತಿಕ ಮಾಸವಲ್ಲಿಯೂ ಮಹಾಬಳೇಶ್ವರನ ಜಾತ್ರೆಗಳಾಗುತ್ತವೆ. ಶಿವರಾತ್ರಿಯ ಜಾತ್ರೆಯಲ್ಲಿ ಸುಮಾರು ೩೫೦೦೦ ಜನ ಕೂಡಿ ೨೫೦೦೦ ರೂಪಾಯಿಯ ವ್ಯಾಪಾರವಾಗುತ್ತದೆ; ಕಾರ್ತಿಕದ ಜಾತ್ರೆಯಲ್ಲಿ

ಸುಮಾರು ೫೦೦೦ ಜನ ಕೂಡುವರು. ಸಿರಶಿಯಲ್ಲಿ ಮರಿಯಮ್ಮನ ಜಾತ್ರೆಯು ಯೆರಡು ವರ್ಷಕ್ಕೊಮ್ಮೆ ಮಾಘ ಮಾಸದ ಸುಮಾರಿನಲ್ಲಿ ಆಗುತ್ತದೆ; ಇದರಲ್ಲಿ ೧೨೦೦೦ ಜನ ಕೂಡಿ ೧೦೦೦೦ ರೂಪಾಯಿಯ ವ್ಯಾಪಾರವಾಗುತ್ತದೆ. ಉಳವಿಯಲ್ಲಿ ಶಿವನ ಜಾತ್ರೆಯು ಮಾಘ ಮಾಸದಲ್ಲಿ ಆಗುತ್ತದೆ. ಇದರಲ್ಲಿ ೫೦೦೦ ಜನ ಕೂಡಿ ಸುಮಾರು ೩೦೦೦ ರೂಪಾಯಿಯ ವ್ಯಾಪಾರವಾಗುತ್ತದೆ.

ಕಾನಡಾ ಜಿಲ್ಲೆಯಲ್ಲಿ ಹಡಗ ಡೋಣಿಗಳಿಂದಾಗುವ ವ್ಯಾಪಾರವು.—ಬ್ರಿಟಿಶ ಇಂಡಿಯಾ ಸ್ಟೀಮನಾವಿಗೇಶನ್ ಕಂಪನಿಯವರ ಹೊಗೆ ಹಡಗಗಳು ವಾರಕ್ಕೊಮ್ಮೆ ಕಾರವಾಡಕ್ಕೆ ಬರುತ್ತವೆ; ಮಳೆ ಇಲ್ಲದಾಗ ಈ ಹಡಗಗಳು ಕುಮಟೆಯ ಬಂದರಕ್ಕೂ ಬರುತ್ತವೆ. ಈ ಹಡಗಗಳು ಮುಂಬಯಿಯಿಂದ ವಿಲಾಯತಿಯ ಸಾಮಾನುಗಳು, ವಸ್ತ್ರಗಳು, ಮುಂತಾದವುಗಳನ್ನು ತಂದು ಕಾರವಾಡದಲ್ಲಿ ಇಳಿಸಿ ತಿರಿಗಿ ಹೋಗುವಾಗ ಅರಳೆ, ತೊಲಿಗಳು, ಯಾಲಕ್ಕಿ, ಅಡಿಕೆ, ಮೆಣಸು, ಮುಂತಾದ ಕಾನಡಾ ಜಿಲ್ಲೆಯಲ್ಲಿ ಹುಟ್ಟುವ ಸರಕುಗಳನ್ನೂ ಬೇರೆ ಜಿಲ್ಲೆಗಳಿಂದ ಕಾರವಾಡಕ್ಕೆ ಹೋಗುವ ಸರಕುಗಳನ್ನೂ ವೊಯ್ಯುತ್ತವೆ. ಮುಂಬಯಿಯಿಂದ ಬರುವ ಸರಕುಗಳು ಕಾನಡಾ ಜಿಲ್ಲೆಯಲ್ಲಿ ವೆಚ್ಚವಾಗುವವಲ್ಲದೆ ಛಕಡಿಗಳ ಮೇಲೆ ಹೇರಿ ಧಾರವಾಡ ಮುಂತಾದ ಕಡೆಗೆ ಹೋಗುತ್ತವೆ.

ಅರಬಸ್ತಾನದಿಂದ ಪಟದ ಹಡಗಗಳು ಆಗಟಂಬರಿನಿಂದ ಮೇ ವರೆಗೆ ಕಾರವಾಡಕ್ಕೂ ಕುಮಟೆಗೂ ಬರುತ್ತವೆ. ಈ ಹಡಗಗಳಲ್ಲಿ ಅರಬಸ್ತಾನದಿಂದ ಉತ್ತತ್ತಿ, ಖಜೂರ, ಡಾಳಿಂಬ, ಬದಾಮು, ರಾಳ, ಮಿಠಾಯಿ, ಮಸೂಕ, ಪಿಸ್ತೆ, ಮುಂತಾದ ಸರಕುಗಳು ಬರುತ್ತವೆ; ಅಕ್ಕಿ, ತೊಲೆಗಳು, ಮುಂತಾದ ಸರಕುಗಳು ಅರಬಸ್ತಾನಕ್ಕೆ ಹೋಗುತ್ತವೆ.

ಕಾರವಾಡ, ಸದಾಶಿವಗಡ, ಅಂಕೋಲಾ, ಕುಮಟಾ, ಮುಂತಾದ ಸಮುದ್ರತೀರದ ಗ್ರಾಮುಗಳಲ್ಲಿ ಸಣ್ಣ ದೊಡ್ಡ ನಾವೆಗಳನ್ನು ಕಟ್ಟುವರು. ಅವುಗಳ ಆಕಾರ, ವಿಸ್ತಾರಗಳ ಮಾನದಿಂದ ಅವುಗಳಿಗೆ ಬೇರೆ ಬೇರೆ ಹೆಸರುಗಳಿರುತ್ತವೆ. ಎಲ್ಲಕ್ಕೂ ದೊಡ್ಡ ನಾವೆಗೆ ಫತ್ತೆಮಾರಿ ಯೆಂದೆನ್ನುವರು. ಫತ್ತೇಮಾರಿಯಲ್ಲಿ ೧೫೦ರಿಂದ ೫೦ ಟನ್ನಿನ ವರೆಗೆ ಮಾಲು ಹೇರುವರು. ಫತ್ತೇಮಾರಿಯ ವಿಸ್ತಾರವಿದ್ದಂತೆ ಅದನ್ನು ಕಟ್ಟಿಸಲಿಕ್ಕೆ ೧೬೦೦೦ರಿಂದ ೪೦೦೦ ರೂಪಾಯಿಯ ವರೆಗೆ ವೆಚ್ಚವಾಗುವದು. ಫತ್ತೇಮಾರಿಗಳು ಪಟಗಳಿಂದ ನಡಿಯುತ್ತವೆ; ಇವು ಸಮುದ್ರದೊಳಗೆ ದಂಡೆಯ ಬಿಟ್ಟು ಹತ್ತೆಂಟು ಮೈಲು ದೂರ ಹೋಗುತ್ತವೆ. ಫತ್ತೆಮಾರಿಗಳು ಉತ್ತರಕ್ಕೆ ವೆಂಗುರ್ಲೆಯ ವರೆಗೂ ದಕ್ಷಿಣಕ್ಕೆ ಕಾಲಿಕತ್ತದ ವರೆಗೂ ಸರಕುಗಳನ್ನು ವೊಯ್ದು ಅತ್ತಕಡೆಯಿಂದ ಹೊಸ ಸರಕುಗಳನ್ನು ತರುವವು. ಫತ್ತೇಮಾರಿಗಿಂತ ಸಣ್ಣ ಆಕಾರದ ನಾವೆಗಳಿಗೆ ಮಚವಾ, ಪಡಾವ, ಗಲಬತ, ಮಹಾಂಗಿರಿ, ಯೆಂಬ ಹೆಸರುಗಳುಂಟು. ಇವುಗಳಲ್ಲಿ ೫ರಿಂದ ೩೦ ಟನ್ನಿನ ವರೆಗೆ ಭಾರ ಹೇರುವರು. ಇವು ದಂಡೆಯ ಬಿಟ್ಟು ಸಮುದ್ರದೊಳಗೆ ಆರೇಳು ಮೈಲಿನ ವರಿಗೆ ಹೋಗುತ್ತವೆ. ಇವಾದರೂ ವ್ಯಾಪಾರದ ಸಲುವಾಗಿ ಫತ್ತೇಮಾರಿಗಳಷ್ಟು ದೂರದ ಪ್ರವಾಸ ಮಾಡುತ್ತವೆ.

ಇವುಗಳನ್ನು ಕಟ್ಟಿಸುವ ವೆಚ್ಚವು ೪೦೦ರಿಂದ ೧೦೦೦ ರೂಪಾಯಿಯ ವರೆಗೆ ಬೀಳುತ್ತದೆ.
ಫತ್ತೇಮಾರಿಗಿಂತ ಮಚವಾ ಅಥವಾ ಪಡಾವವು ಹಗುರಿರುತ್ತದೆ; ಅದಕ್ಕೆ ವೆಚ್ಚ ಕಡಿಮೆ
ಬೀಳುತ್ತದೆ; ಅದನ್ನು ನಡಿಸಲಿಕ್ಕೆ ಮನುಷ್ಯರೂ ಕಡಿಮೆ ಬೇಕಾಗುತ್ತಾರೆ; ಆದ್ದರಿಂದ
ಈ ಮಧ್ಯಮ ಪ್ರತಿಯ ನಾವೆಗಳನ್ನೇ ಬಹು ಜನರು ಮಾಡಿಸುವರು. ಡೋಣಿಗಳು
ಮಚವಾ ಪಡಾವಳಿಗಿಂದ ಬಹಳ ಸಣ್ಣವಿರುತ್ತವೆ. ಅವುಗಳಿಗೆ "ಉಲಂಡಿ" ಯೆಂಬ
ತೋಲು ಹಿಡಿಯುವ ಕೊರಡನ್ನು ವೊಂದು ಬದಿಗೆ ಕಟ್ಟಿ ನೀರೊಳಗೆ ಹಾಕುವರು.
ಇವು ಸಮುದ್ರದೊಳಗೆ ಬಹಳ ದೂರ ಹೋಗುವದಿಲ್ಲ, ದೂರದ ಪ್ರವಾಸವನ್ನೂ ಮಾಡು
ವದಿಲ್ಲ. ಮುಖ್ಯವಾಗಿ ಮೀನು ಹಿಡಿಯುವ ಕೆಲಸಕ್ಕೆ ಇವುಗಳನ್ನು ಉಪಯೋಗಿಸುವರು.

## ೩ನೇ ಪ್ರಕರಣ.

## ಶಿಲ್ಪಗಳೂ ಕೈಗಾರಿಕೆಗಳೂ.

ಎಲ್ಲ ಜನರಿಗೆ ಬೇಕಾಗುವಂಥ ಪದಾರ್ಥಗಳನ್ನು ಮಾಡುವ ಕೈಕೆಲಸದ ಜನರು
ಪಟ್ಟಣಗಳಲ್ಲಿಯೂ ದೊಡ್ಡ ಹಳ್ಳಿಗಳಲ್ಲಿಯೂ ಸಹ ಇರುತ್ತಾರೆ. ಇಂಥಾ ಜನರೆಂದರೆ
ಸೊನ್ನಗಾರರು, ಉಪ್ಪಾರರು, ಬಡಿಗಿಗಳು, ಕಮ್ಮಾರರು, ಕುಂಬಾರರು, ಗಾಣಿಗರು, ಕಲ
ಯಿಗಾರರು, ಸಮ್ಮಗಾರರು, ಢೋರರು, ಇತ್ಯಾದಿ. ಸೊನ್ನಗಾರಿಕೆಯ ಕೆಲಸ ಮಾಡುವ
ವರು ಪಂಚಾಳರೇ ಮುಖ್ಯ. ಧಾರವಾಡ ಜಿಲ್ಲೆಯ ಸೊನ್ನಗಾರರ ಕೈಕೆಲಸವು ಶ್ರೇಷ್ಠವೆ
ನಿಸುತ್ತದೆ. ಉಪ್ಪಾರರ ಕೆಲಸವನ್ನು ಹಲವು ಜಾತಿಗಳ ಜನರು ಮಾಡುತ್ತಾರೆ; ಇಂಥ
ವರೇ ಶ್ರೇಷ್ಠರೆಂದು ಹೇಳಲಿಕ್ಕೆ ಬರುವ ಹಾಗಿಲ್ಲ. ವಾಡಿಕೆಯಾಗಿ ಕರೆಕಲ್ಲಿನ ಮನೆಗ
ಳನ್ನು ಕಟ್ಟುವವರು ಹೆಚ್ಚು ಕುಶಲರಿರುತ್ತಾರೆ. ಬಡಿಗಿತನದ ಕೆಲಸವನ್ನು ಸಹ ಹಲವು
ಜಾತಿಗಳ ಜನರು ಮಾಡುತ್ತಿದ್ದಾಗ್ಯೂ ಪಂಚಾಳರೇ ಶ್ರೇಷ್ಠರೆನಿಸಿ ಕೊಳ್ಳುತ್ತಾರೆ; ಬಡಿಗಿ
ತನವು ಅವರ ಕುಲ ಪರಂಪರಾಗತವಾದ ಹೋರೆ. ಚಿತ್ರ ಕೊರಿಯುವ ಕೆಲಸದಲ್ಲಿ
ಧಾರವಾಡ ಜಿಲ್ಲೆಯ ಬಡಿಗಿಗಳು ಶ್ರೇಷ್ಠರೆನಿಸುತ್ತಾರೆ. ಆದರೆ ಜೋಡಗಿರಿಯ ಕೆಲಸದ
ಲ್ಲಿಯೂ ಮಾಪಿನ ಕೆಲಸದಲ್ಲಿಯೂ ಕೊಂಕಣದ ಬಡಿಗಿಗಳು ಮೇಲಾದವರು. ಕುಂಬಾ
ರರು ಬಹುತರ ಯೆಲ್ಲ ಕಡೆಯಲ್ಲಿ ಲಿಂಗವಂತರೇ ಇದ್ದಾರೆ. ವಿಜಾಪುರದ ಕುಂಬಾರರು
ಕುಶಲರಿದ್ದಾರೆಂದು ಹೇಳುತ್ತಾರೆ. ಖಾನಾಪುರದ ಕುಂಬಾರರು ತಿಳುವಾದ ಬಿಳಿ ಗಡಿಗೆ
ಗಳನ್ನು ಸರಸಾಗಿ ಮಾಡುತ್ತಾರೆ. ಕಮ್ಮಾರಿಕೆಯ ಕೆಲಸವನ್ನಾದರೂ ಹಲವು ಜಾತಿಗಳ
ಜನರು ಮಾಡುತ್ತಿದ್ದಾಗ್ಯೂ, ಅದು ಪಂಚಾಳರ ಕುಲದ ಹೋರೆಯು; ಈ ಕೆಲಸದಲ್ಲಿ
ಯೂ ಕೊಂಕಣದವರೇ ಹೆಸರಾಗಿದ್ದಾರೆ. ಗಾಣಿಗರು ಯೆಲ್ಲ ಕಡೆಯಲ್ಲಿ ಲಿಂಗವಂತರೇ
ಇದ್ದಾರೆ. ಬೆಳಗಾವಿಯ ಗಾಣಿಗರು ಹೆಚ್ಚು ಸುಖಿಯಾಗಿದ್ದಾರೆ. ಕಲಯಿಗಾರರು ಯೆಲ್ಲ
ಕಡೆಯಲ್ಲಿ ಮುಸಲ್ಮಾನರೇ ಇದ್ದಾರೆ. ಮುಸಲ್ಮಾನರ ವಸ್ತಿಯು ಬಹಳ ಇದ್ದಲ್ಲಿ ಕಲಯಿ
ಗಾರರು ಬಹುತರ ಇರುತ್ತಾರೆ. ಸಮ್ಮಗಾರರ ಜಾತಿಯು ಸ್ವತಂತ್ರವಿರುತ್ತದೆ. ಆದರೂ
ಅವರ ಕೆಲಸವನ್ನು ಕೆಲ ಕೆಲವು ಕಡೆಯಲ್ಲಿ ಢೋರರು ಮಾಡುತ್ತಾರೆ. ವಿಜಾಪುರ,

ಚೈನಾಪುರ, ನಾಗರಾಳ, ಮುಂತಾದ ಕಡೆಯಲ್ಲಿ ಮಿದುವುಳ್ಳಂಥ ತಿಳುವಾದ ಜೋಡುಗಳು ಸರಸಾಗಿ ಆಗುತ್ತವೆ.

ಅರಳೆಯನ್ನು ಅರಿಯುವದು.— ಈ ಕೆಲಸವನ್ನು ಯೆಲ್ಲ ಕಡೆಯಲ್ಲಿ ವೊಕ್ಕಲಿಗರ ಹೆಂಗಸರು ಮಾಡುತ್ತಾರೆ. ಹತ್ತಿಯ ಬಿಡಿಸುವವರಂತೆ ಹತ್ತಿಯ ಅರಿಯುವವರು ಸಹ ಅರಳಿಯನ್ನೇ ಕೂಲೀ ತಕ್ಕೊಳ್ಳುವರು. ಆದರೆ ವೊಳಗಡೆಯಲ್ಲಿ ರೊಕ್ಕ ಕೊಟ್ಟು ಹತ್ತಿಯನ್ನು ಅರಿಸುವ ರೂಢಿಯು ಕೆಲ ಕೆಲವು ಕಡೆಯಲ್ಲಿ ಆರಂಭವಾಗಿದೆ. ಪೂರ್ವದಲ್ಲಿ ಅಮೇರಿಕದ ಹತ್ತಿಯನ್ನು ಈ ಶೀಮೆಯ ವೊಕ್ಕಲಿಗರು ಬಿತ್ತುತ್ತಿದ್ದಾಗ ಹತ್ತಿಯನ್ನು ಅರಿಯುವ ಕರಗಸದ ಯಂತ್ರಗಳು ದೇಶದ ತುಂಬ ನಡಿಯುತ್ತಿದ್ದವು. ಸುಮಾರು ೩೦ ವರ್ಷದ ಹಿಂದೆ ಹೆಂಗಸರು ಹತ್ತಿಯನ್ನು ಅರಿಯುವ ನಡಾವಳಿಯು ಬಹುತರ ಹಿಂದಕ್ಕೆ ಬಿದ್ದಿತ್ತೆಂದು ಹೇಳ ಬಹುದು. ೧೦, ೨೦, ೩೦ ಯಂತ್ರಗಳನ್ನಿಟ್ಟು ಹತ್ತಿಯನ್ನು ಅರಿಸುವ ದೊಡ್ಡ ದೊಡ್ಡ ಕಾರಖಾನೆಗಳು ಧಾರವಾಡ ಜಿಲ್ಲೆಯಲ್ಲಿ ಬಹಳ ಆಗಿದ್ದವು. ಆದರೆ ಅಮೇರಿಕದ ಹತ್ತಿಯಿಂದ ವೊಕ್ಕಲಿಗರಿಗೆ ಆಗ ತಕ್ಕಷ್ಟು ಲಾಭವಾಗದ್ದರಿಂದ ಆ ಹತ್ತಿಯ ಹಿಂದಕ್ಕೆ ಬಿತ್ತು. ದೇಶೀ ಹತ್ತಿಯ ಕಾಳು ಸಣ್ಣವಿದ್ದದರಿಂದ ಕರಗಸದ ಯಂತ್ರದಲ್ಲಿ ಅದು ವೊಳಿತಾಗಿ ಹಸನಾಗದೆ ಕೇಡು ಬಹಳಾಗುತ್ತಿತ್ತು. ಆದ್ದರಿಂದ ಆ ಯಂತ್ರಗಳು ಹಿಂದಕ್ಕೆ ಬಿದ್ದವು. ಸದ್ಯಕ್ಕೆ ಬೆಳಗಾವೀ ಜಿಲ್ಲೆಯಲ್ಲಿ ಪರಸಗಡ ತಾಲೂಕಿನಲ್ಲಿ ೨೮, ಬೈಲಹೊಂಗಲದಲ್ಲಿ ೨, ಅಂತೂ ೩೦ ಯಂತ್ರಗಳಿರುತ್ತವೆ. ಆದರೆ ಇವುಗಳ ಕೆಲಸವು ಬಹುತರ ನಡಿಯುವದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿಯಲ್ಲಿ ೮, ಗದಗಿನಲ್ಲಿ ೧೮, ಅಂತೂ ೨೬ ರೂಳಿನ ಯಂತ್ರಗಳು ಉಗಿಯಿಂದ ಸದ್ಯಕ್ಕೆ ನಡಿಯುತ್ತವೆ. ಈ ಯಂತ್ರಗಳಿಂದ ಬಹಳ ಲಾಭವಾಗುವದನ್ನು ಜನರು ನೋಡುತ್ತಿದ್ದಾಗ್ಯೂ ಈ ಕೆಲಸಕ್ಕೆ ಯಾರೂ ಕೈ ಹಾಕುವದಿಲ್ಲೆಂಬದು ಆಶ್ಚರ್ಯವು.

ಅರಳೆಯನ್ನು ವೊತ್ತಿ ಗಂಟು ಕಟ್ಟುವ ಯಂತ್ರಗಳು.— ಈ ಯಂತ್ರಗಳು ಗದಗಿನಲ್ಲಿ ಯೆರಡು, ಹುಬ್ಬಳ್ಳಿಯಲ್ಲಿ ಯೆರಡು, ಸದ್ಯಕ್ಕೆ ನಡಿಯುತ್ತವೆ. ಒಂದೊಂದು ಯಂತ್ರದಲ್ಲಿ ವರ್ಷಕ್ಕೆ ೧೦೦೦ದಿಂದ ೧೫೦೦ರ ವರೆಗೆ ಅರಳೆಯ ಗಂಟುಗಳು ವೊತ್ತಿ ತಯಾರಾಗುತ್ತವೆ. ಬೆಳಗಾವಿಯಲ್ಲಿ ವೊತ್ತುವ ಯಂತ್ರವನ್ನು ಬಹಳ ಸಾರಿ ಮಾಡಿದರು. ಆದರೆ ಅದರಿಂದ ಕೆಲಸವು ವೊಳಿತಾಗಿ ಸಾಗಲಿಲ್ಲ.

ನೂಲುವದು.— ಅರಳೆಯ ನೂಲು ಮಾಡುವ ಕೆಲಸವನ್ನು ಸಹ ಯೆಲ್ಲ ಕಡೆಯಲ್ಲಿ ವೊಕ್ಕಲಿಗರ ಹೆಂಗಸರೇ ಮಾಡುತ್ತಾರೆ. ಹೊಲಿಯರ ನೂಲು ಹೆಸರಾಗಿರುತ್ತದೆ. ಆದರೆ ವಿಲಾಯತಿಯಿಂದಲೂ ಮುಂಬಯಿಯಿಂದಲೂ ತಯಾರಾದ ನೂಲು ಬಹಳ ಬರುತ್ತಿರುವ ಕಾರಣ ವೊಕ್ಕಲಿಗರ ಹೆಂಗಸರ ಜಂತ್ರಗಳು ಹಿಂದಕ್ಕೆ ಬೀಳುತ್ತ ನಡಿದವೆ. ಹುಬ್ಬಳ್ಳಿಯಲ್ಲಿ ನೂಲು ತೆಗೆದು ನೆಯುವ ಯಂತ್ರದ ದೊಡ್ಡ ಕಾರಖಾನೆಯು ನಾಲ್ಕಾರು ವರ್ಷದಿಂದ ನಡಿದದೆ. ಅದರಲ್ಲಿ ಭಾಗೀದಾರರಿಗೆ ಆರಂಭದಲ್ಲಿ ಲಾಭವೇನು ಆಗಲಿಲ್ಲ; ಆದರೆ ಈಗ ವೊಳಿತಾಗಿ ಲಾಭವಾಗುತ್ತದೆಂದು ಹೇಳುತ್ತಾರೆ.

**ವಸ್ತ್ರಗಳನ್ನು ನೆಯ್ಯುವದು.**—ಈ ಕೆಲಸವು ನಾಲ್ಕೂ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಮಾನದಿಂದ ಸಾಗುತ್ತದೆ. ಖಾದೀ ಅಥವಾ ಹಚ್ಚಡ, ಥಡೋತಿಯ ಶೀರೆಗಳು, ಖಣಗಳು, ಥಡೋತಿಯ ಧೋತ್ರಗಳು, ಪಂಜೆಗಳು, ವೊಲ್ಲಿಗಳು, ಉರುಟು ರುಮಾಲಗಳು, ಮುಂತಾದ ಕಡಿಮೇ ಪ್ರತಿಯ ವಸ್ತ್ರಗಳು ಬಹಳ ಕಡೆಯಲ್ಲಿ ಹುಟ್ಟುತ್ತವೆ. ಒಂದು ವಿಜಾಪುರ ಜಿಲ್ಲೆಯಲ್ಲಿಯೇ ಸುಮಾರು ೮೦ ಗ್ರಾಮಗಳಲ್ಲಿ ಮಗ್ಗಗಳಿರುತ್ತವೆ. ಬೆಳಗಾವೀ ಜಿಲ್ಲೆಯಲ್ಲಿ ಗೋಕಾವಿ, ಚಿಕ್ಕೋಡಿ, ಶಂಕೇಶ್ವರ, ಬೈಲಹೊಂಗಲ, ಬೆಳಗಾವಿ, ಮುರಗೋಡ, ಅಥಣಿ, ಪಾಛಾಪುರ, ದೇಶನೂರು, ಮುನ್ನೋಳ್ಳಿ, ಸವದತ್ತಿ, ಕಿತ್ತೂರು, ಮುಂತಾದ ಗ್ರಾಮಗಳಲ್ಲಿ ವರ್ಷಕ್ಕೆ ಸುಮಾರು ೨ ಲಕ್ಷ ರೂಪಾಯಿ ಬೆಲೆ ಬಾಳುವಷ್ಟು ವಸ್ತ್ರಗಳು ಹುಟ್ಟುತ್ತವೆ. ಧಾರವಾಡ ಜಿಲ್ಲೆಯಲ್ಲಿ ನೇಕಾರರ ಮನೆಗಳು ವೊಟ್ಟಿಗೆ ಸುಮಾರು ೧೦೦೦೦ಕ್ಕಿಂತ ಹೆಚ್ಚು ಇರುತ್ತವೆ; ಹುಬ್ಬಳ್ಳಿ, ಗದಗು, ಬೆಟಗೇರಿ, ಈ ಗ್ರಾಮಗಳ ವಸ್ತ್ರಗಳು ಪ್ರಸಿದ್ಧ ಉಂಟು. ಆದರೆ ಕಾನಡಾ ಜಿಲ್ಲೆಯಲ್ಲಿ ವಸ್ತ್ರಗಳು ಬಹಳವಾಗಿ ಹುಟ್ಟುವಂತೆ ತೋರುವದಿಲ್ಲ. ಅಲ್ಪ ಸ್ವಲ್ಪವಾಗಿ ಹುಟ್ಟುವ ಉರುಟು ಬಟ್ಟೆಗಳು ಅಲ್ಲಿಂದಲ್ಲೇ ವೆಚ್ಚಾಗುತ್ತವೆ; ಘಟ್ಟದ ಕೆಳಗೆ ಮಗ್ಗಗಳಿರುವದಿಲ್ಲ.

**ರುಮಾಲಗಳು.**—ಬೆಲೆಯುಳ್ಳ ರುಮಾಲಗಳು ಯೆಲ್ಲಿಯೂ ಹುಟ್ಟುವದಿಲ್ಲ. ಬಾಗಲಕೋಟೆ, ಬಾದಾಮಿ, ಚಿಕ್ಕೋಡಿ, ದೇಶನೂರು, ಶಹಾಪುರ, ಬೈಲಹೊಂಗಲ, ಹುಬ್ಬಳ್ಳಿ, ಗದಗು, ಬೆಟಗೇರಿ, ಮುಂತಾದ ಕಡೆಯಲ್ಲಿ ಮಧ್ಯಮ ಪ್ರತಿಯ ಸಾದಾ ರುಮಾಲುಗಳೂ ವೊಕ್ಕಲಿಗರ ಉರುಟು ರುಮಾಲುಗಳೂ ಹುಟ್ಟುತ್ತವೆ.

**ಮುಂಡಾಸಗಳು.**—ಬೆಳಗಾವೀ ಜಿಲ್ಲೆಯಲ್ಲಿ ಚಿಕ್ಕೋಡಿಯಲ್ಲಿ ಮುಂಡಾಸಗಳು ಹುಟ್ಟುತ್ತವೆ. ೩೦, ೩೫ ರೂಪಾಯಿ ಬೆಲೆ ಬಾಳುವಂಥ ಮೇಲಾದ ಮುಂಡಾಸಗಳನ್ನು ದೇಶನೂರಲ್ಲಿ ನೆಯುತ್ತಾರೆ.

**ಧೋತ್ರಗಳು.**—ವಿಜಾಪುರದಲ್ಲಿ ಬಾಗಲಕೋಟೆ, ಮಲ್ಲಾಪುರ, ಮಮದಾಪುರ, ಬಾದಾಮಿ; ಬೆಳಗಾವೀ ಜಿಲ್ಲೆಯಲ್ಲಿ ಗೋಕಾವಿ, ಅಥಣಿ, ಬೈಲಹೊಂಗಲ, ಶಹಾಪುರ; ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ, ಅಣ್ಣೀಗೇರಿ, ಲಕ್ಕುಂಡಿ, ನರಗುಂದ, ಮುಂತಾದ ಕಡೆಯಲ್ಲಿ ಬೆಲೆಯುಳ್ಳ ಧೋತ್ರಗಳು ಹುಟ್ಟುತ್ತವೆ.

**ಶೀರೆಗಳು.**—ವಿಜಾಪುರ ಜಿಲ್ಲೆಯಲ್ಲಿ ಬಾಗಲಕೋಟೆ, ಮಲ್ಲಾಪುರ, ಗುಡೂರು, ಹುನಗುಂದ, ಇಲಕಲ್ಲು, ಕಮತಿಗಿ, ಸೂಳಿಭಾವಿ; ಬೆಳಗಾವೀ ಜಿಲ್ಲೆಯಲ್ಲಿ ಬೆಳಗಾವಿ, ಶಹಾಪುರ, ಚಿಕ್ಕೋಡಿ, ದೇಶನೂರು; ಧಾರವಾಡ ಜಿಲ್ಲೆಯಲ್ಲಿ ಗದಗು, ಬೆಟಗೇರಿ, ಹುಬ್ಬಳ್ಳಿ, ಲಕ್ಕೇಶ್ವರ, ಮುಂತಾದ ಕಡೆಯಲ್ಲಿ ಬೆಲೆಯುಳ್ಳ ಶೀರೆಗಳು ಹುಟ್ಟುತ್ತವೆ. ಹೇಳಿ ಮಾಡಿಸಿದರೆ ಜರದ ಅಂಚು ಹಾಕಿ ೧೦೦ ರೂಪಾಯಿಯ ವರೆಗೆ ಬೆಲೆ ಬಾಳುವಂಥ ಶೀರೆಗಳನ್ನು ನೆಯ್ಯುವರು.

**ಖಣಗಳು.**—ಇವು ಬಹಳ ಕಡೆಯಲ್ಲಿ ಹುಟ್ಟುತ್ತವೆ. ಆದರೆ ಗುಳೆದಗುಡ್ಡ, ಶಹಾಪುರ, ಹುಬ್ಬಳ್ಳಿ, ಗದಗು, ಮುಂತಾದ ಕಡೆಯಲ್ಲಿ ಹುಟ್ಟುವ ಖಣಗಳು ಪ್ರಸಿದ್ಧವುಂಟು. ಈ ಗ್ರಾಮಗಳಲ್ಲಿ ಬೆಲೆಯುಳ್ಳ ಜರದ ಖಣಗಳು ಸಹ ಹುಟ್ಟುತ್ತವೆ.

ಪೀತಾಂಬರಗಳು.— ಬಾದಾವಿ, ಗೋವನಕೊಪ್ಪ, ಗುಳೇದಗುಡ್ಡ, ಈ ಗ್ರಾಮಗಳಲ್ಲಿ ಹೇಳಿ ಮಾಡಿಸಿದರೆ ಬೆಲೆಯುಳ್ಳ ಜರದ ಪೀತಾಂಬರಗಳು ಹುಟ್ಟುತ್ತವೆ. ಇಲಕಲ್ಲು, ಗೋಕಾವಿ, ಬೆಳಗಾವಿ, ಹುಬ್ಬಳ್ಳಿ, ಗದಗು, ಮುಂತಾದ ಗ್ರಾಮಗಳಲ್ಲಿಯೂ ಬೆಲೆಯುಳ್ಳ ರೇಶಿಮೆಯ ಶೀರೆಗಳೂ ಪೀತಾಂಬರಗಳೂ ಆಗುತ್ತವೆ. ಆದರೆ ಇಂಥಾ ಬೆಲೆಯುಳ್ಳ ವಸ್ತ್ರಗಳನ್ನು ನೇಕಾರರು ಯಾರಾದರೂ ಹೇಳಿ ಮಾಡಿಸಿದ ಹೊರ್ತು ಬಹುತರ ಮಾಡುವದಿಲ್ಲ.

**ಅಚ್ಚಿನ ವಸ್ತ್ರಗಳು.**

ಜಾಜೀಮು, ಕರಳೆಯ ಹಚ್ಚಡ.— ಬೆಳಗಾವೀ ಜಿಲ್ಲೆಯಲ್ಲಿ ಗೋಕಾವಿ, ಮುರಗೋಡ, ಮುನ್ನೊಳ್ಳಿ; ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ, ಕರ್ಜಗಿ, ಈ ಗ್ರಾಮಗಳಲ್ಲಿ ಖಾದಿಯ ವಸ್ತ್ರಕ್ಕೆ ಅಚ್ಚು ಹಾಕಿ ಜಾಜೀಮುಗಳನ್ನೂ, ಕರಳೆಯ ಹಚ್ಚಡಗಳನ್ನೂ, ಉರುಟು ಚೀಟುಗಳನ್ನೂ ಮಾಡುವರು. ಮುರಗೋಡದ ಜಾಜೀಮುಗಳೂ ಹಚ್ಚಡಗಳೂ ಪ್ರಸಿದ್ಧ.

ಜಮ್ಮಖಾನೆಗಳು.— ವಿಜಾಪುರ ಜಿಲ್ಲೆಯಲ್ಲಿ ವಿಜಾಪುರ, ಇಲಕಲ್ಲು, ಕೊಲ್ಲಾರ, ಸೂಳೀಬಾವಿ, ಈ ಗ್ರಾಮಗಳಲ್ಲಿ ಜಮ್ಮಖಾನೆಗಳು ಹುಟ್ಟುತ್ತವೆ. ಕೊಲ್ಲಾರದ ಜಮ್ಮಖಾನೆಗಳು ಪ್ರಸಿದ್ಧ. ಬೆಳಗಾವೀ ಜಿಲ್ಲೆಯಲ್ಲಿ ಬೆಳಗಾವಿ, ಬೈಲಹೊಂಗಲ, ಮುಗಟಖಾನ ಹುಬ್ಬಳ್ಳಿ, ಈ ಗ್ರಾಮಗಳಲ್ಲಿ ಸಾಧಾರಣ ಪ್ರತಿಯ ಜಮ್ಮಖಾನೆಗಳು ಹುಟ್ಟುತ್ತವೆ. ಧಾರವಾಡ ಜಿಲ್ಲೆಯಲ್ಲಿ ಧಾರವಾಡದ ತುರಂಗದಲ್ಲಿಯೂ ನವಲಗುಂದದಲ್ಲಿಯೂ ಅತ್ಯುತ್ತಮ ತರದ ಜಮ್ಮಖಾನೆಗಳು ಹುಟ್ಟುತ್ತವೆ. ೧೦ರಿಂದ ೧೫ ಮೊಳದ ವರೆಗೆ ಅಗಲು, ೨೦ರಿಂದ ೩೦ ಮೊಳದ ವರೆಗೆ ಉದ್ದ, ಇಂಥಾ ಜಮ್ಮಖಾನೆಗಳನ್ನು ರತ್ನಗಂಬಳಿಗಳಂತೆ ಚಿತ್ರವಿಚಿತ್ರವಾಗಿ ಮಾಡುವರು. ಇಷ್ಟು ದೊಡ್ಡ ಜಮ್ಮಖಾನೆಗಳಿಗೆ ೨೦೦ ರೂಪಾಯಿಗಿಂತ ಹೆಚ್ಚು ಬೆಲೆ ಬೀಳುವದು. ಮುಸಲ್ಮಾನರೇ ಯೆಲ್ಲ ಕಡೆಯಲ್ಲಿ ಜಮ್ಮಖಾನೆಗಳನ್ನು ನೆಯ್ಯುವರು. ಹುಬ್ಬಳ್ಳಿಯಲ್ಲಿಯೂ ಜಮ್ಮಖಾನೆಗಳಾಗುತ್ತವೆ.

ಕಂಬಳಿಗಳು.— ಕುರುಬರು ಕಂಬಳಿಗಳನ್ನು ನೆಯ್ಯುವರು. ಅವರ ವಸ್ತಿ ಇದ್ದಲ್ಲಿ ಬಹುತರ ಸಣ್ಣ ದೊಡ್ಡ ಕಂಬಳಿಗಳು ಆಗುತ್ತವೆ. ವಿಜಾಪುರ ಜಿಲ್ಲೆಯಲ್ಲಿ ಸಿಂದಗೀ ತಾಲೂಕಿನಲ್ಲಿಯೂ ಧಾರವಾಡ ಜಿಲ್ಲೆಯಲ್ಲಿ ರಾಣೀಬಿನ್ನೂರು ತಾಲೂಕಿನಲ್ಲಿಯೂ ಮೇಲಾದ ಕಂಬಳಿಗಳು ಹುಟ್ಟುತ್ತವೆ. ಶಿರಟ್ಟಿ ಲಕ್ಷ್ಮೇಶ್ವರಗಳಲ್ಲಿಯೂ ಕಂಬಳಿಗಳು ಪೊಳಿತಾಗಿ ಆಗುತ್ತವೆ.

ಟೊಪ್ಪಿಗೆಗಳು.— ಗೋಕಾವಿಯಲ್ಲಿಯೂ ಹುಬ್ಬಳ್ಳಿಯಲ್ಲಿಯೂ ಬ್ರಾಹ್ಮಣರ ಇಲ್ಲವೆ ಆರೇರ ಮುಂತಾದ ಆಕಾರದ ಟೊಪ್ಪಿಗೆಗಳನ್ನು ಜೀನಗಾರರು ಮಾಡುತ್ತಾರೆ. ಆದರೆ ಅವು ಪುಣೆಯ ಟೊಪ್ಪಿಗೆಗಳಷ್ಟು ಸರಸಾಗಿ ಇರುವದಿಲ್ಲ.

ಹಿತ್ತಾಳಿಯ ತಾಮ್ರಗಳ ಪಾತ್ರೆಗಳು.— ವಿಜಾಪುರ ಜಿಲ್ಲೆಯಲ್ಲಿ ಬಾಗಲಕೋಟೆ, ಹನಗಂಡಿ, ತೇರದಾಳ, (ಸಾಂಗಲೀ ಇಲಾಖೆ) ಬೆಳಗಾವೀ ಜಿಲ್ಲೆಯಲ್ಲಿ ಬೆಳಗಾವಿ, ಶಹಾಪುರ (ಸಾಂಗಲೀ ಇಲಾಖೆ); ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ, ಧಾರವಾಡ;

ಕಾನಡಾ ಜಿಲ್ಲೆಯಲ್ಲಿ ಕುಮಟಾ, ಹೊನ್ನಾವರ, ಶಿರಸಿ, ಈ ಗ್ರಾಮಗಳಲ್ಲಿ ತಾಮ್ರ ಹಿತ್ತಾಳಿಗಳ ಪಾತ್ರೆಗಳು ಹುಟ್ಟುತ್ತವೆ. ಹನಗಂಡಿ, ತೇರದಾಳ, ಶಹಾಪುರ, ಹುಬ್ಬಳ್ಳಿ, ಈ ಗ್ರಾಮಗಳಲ್ಲಿ ಹುಟ್ಟುವ ಮೇಲಾದ ಪಾತ್ರೆಗಳು ದೂರ ದೂರ ಮಾರಾಟಕ್ಕೆ ಹೋಗುತ್ತವೆ. ಹನಗಂಡಿಯ ಅಖಂಡ ತಪಲೆಗಳು ಪ್ರಸಿದ್ಧ ಉಂಟು. ಗೋಕಾವಿಯಲ್ಲಿ ಸಮಯಿ, ಪಂಚಪಾತ್ರೆ ಮುಂತಾದ ಹೊಯಿಗೆಯ ಪಾತ್ರೆಗಳು ಸರಸಾಗಿ ಹುಟ್ಟುತ್ತವೆ.

ಉಪ್ಪು.—ಕಾನಡಾ ಜಿಲ್ಲೆಯಲ್ಲಿ ಕುಮಟೆಯ ಹತ್ತರ ಸಾಣೀಕಟ್ಟೆ ಯೆಂಬಲ್ಲಿ ವೊಂದೇ ಕಡೆಯಲ್ಲಿ ಮಾತ್ರ ಈಗ ಉಪ್ಪು ಹುಟ್ಟುತ್ತದೆ. ಉಪ್ಪು ಮಾಡುವ ಜನರು ಸರಕಾರಕ್ಕೆ ಯೆಕರೆಗೆ ೬೦ರಿಂದ ೩೦ ರೂಪಾಯಿಯ ವರೆಗೆ ತೆರಿಗೆ ಕೊಡುತ್ತಾರೆ. ಇದಲ್ಲದೆ ಉಪ್ಪಿನ ಮೇಲಿನ ಜಕಾತಿ ಬೇರೆ. ಸಾಣೀಕಟ್ಟೆಯಲ್ಲಿ ವೊಟ್ಟಿಗೆ ೧೬೮ ಆಗರಗಳಲ್ಲಿ ಉಪ್ಪು ಹುಟ್ಟುತ್ತದೆ. ಇವುಗಳಲ್ಲೆಲ್ಲ ಕೂಡಿ ೧೯೪೦೦ ಮಳಿಗಳುಂಟು. ಅವುಗಳಲ್ಲಿ ವರ್ಷಕ್ಕೆ ಸುಮಾರು ೬೫೦೦ ಟನ್ನ ಅಂದರೆ ೧೦೦೦೦೦ ಮಣ ಸಮುದ್ರದ ಉಪ್ಪು ಹುಟ್ಟುತ್ತದೆ. ಉಪ್ಪು ಮಾಡುವ ಕೆಲಸವು ಫೇಬ್ರುವಾರಿಯಿಂದ ಮೇ ವರೆಗೆ ನಡಿಯುತ್ತದೆ. ಸರಕಾರದ ಅಪ್ಪಣೆಯ ಹೊರ್ತು ಉಪ್ಪು ಮಾಡಲಿಕ್ಕೆ ಯಾರಿಗೂ ಸ್ವತಂತ್ರವಿಲ್ಲ.

ಸೋರುಪ್ಪು.—ವಿಜಾಪುರ ಜಿಲ್ಲೆಯಲ್ಲಿ ವಿಜಾಪುರ, ಸಿಂದಗಿ, ಬಾಗೇವಾಡಿ, ಮುದ್ದೇಬಿಹಾಳ, ಈ ನಾಲ್ಕು ತಾಲೂಕುಗಳಲ್ಲಿ ಕೂಡಿ ೬೫ ಜನ ಉಪ್ಪಾರರು ಸರಕಾರದಿಂದ ಪರವಾನೆ ತಕ್ಕೊಂಡು ಸೋರುಪ್ಪು ಮಾಡುತ್ತಾರೆ. ಸೋರುಪ್ಪು ಮಾಡುವ ಕೆಲಸವು ದಿಜಂಬರಿನಿಂದ ಮೇ ವರೆಗೆ ಆರು ತಿಂಗಳು ನಡಿಯುತ್ತದೆ. ಎಲ್ಲ ಕೂಡಿ ವರ್ಷಕ್ಕೆ ಸುಮಾರು ೪೦೦೦ ಮಣ ಸೋರುಪ್ಪು ಹುಟ್ಟುತ್ತದೆ. ಧಾರವಾಡ ಜಿಲ್ಲೆಯಲ್ಲಿ ಮೊದಲು ಬಹಳ ಕಡೆಯಲ್ಲಿ ಸೋರುಪ್ಪು ಹುಟ್ಟುತ್ತಿತ್ತು. ಆದರೆ ಈಗ ಧಾರವಾಡದ ಹತ್ತರ ಹೆಬ್ಬಳ್ಳಿಯಲ್ಲಿ ಮಾತ್ರ ವೊಬ್ಬ ಉಪ್ಪಾರನು ಸೋರುಪ್ಪು ಮಾಡುತ್ತಾನೆ. ವರ್ಷಕ್ಕೆ ಸುಮಾರು ೩೬ ಮಣ ಸೋರುಪ್ಪು ಆಗುತ್ತದೆ.

ಕಾಗದ.—ಪೂರ್ವದಲ್ಲಿ ಬಾಗಲಕೋಟೆ, ಗೋಕಾವಿ, ಮುನ್ನೊಳ್ಳಿ, ಮುರಗೋಡ, ಧಾರವಾಡ, ಹುಬ್ಬಳ್ಳಿ, ಗದಗು, ಗುತ್ತಲ, ಕರ್ಜಗಿ, ನವಲಗುಂದ, ರಾಣೀಬಿನ್ನೂರ, ಮುಂತಾದ ಕಡೆಯಲ್ಲಿ ಕಾಗದವು ಬಹಳ ಹುಟ್ಟುತ್ತಿತ್ತು. ಆದರೆ ಈಗ ಬಾಗಲಕೋಟೆಯಲ್ಲಿಯೂ ಗೋಕಾವಿಯಲ್ಲಿಯೂ ಮಾತ್ರ ಉರುಟು ಕಾಗದವು ಅಲ್ಪಮಾನದಿಂದ ಹುಟ್ಟುತ್ತದೆ. ಈ ಕಾಗದವನ್ನು ಅಂಗಡಿಕಾರರು ವಹಿಗಳನ್ನು ಕಟ್ಟಲಿಕ್ಕೂ ಪುಡಿಗಳನ್ನು ಕಟ್ಟಲಿಕ್ಕೂ ತಕ್ಕೊಳ್ಳುತ್ತಾರೆ.

ಸಾಣೀ ಕಲ್ಲು, ಬೀಸುವ ಕಲ್ಲು.—ಇವು ಬಾದಾಮಿಯ ಗುಡ್ಡದಲ್ಲಿಯೂ ಕಪ್ಪತ ಗುಡ್ಡದಲ್ಲಿಯೂ ಹುಟ್ಟುತ್ತವೆ. ಬಾದಾಮಿಯ ಹತ್ತರ ಬಳವಲ ಕೊಪ್ಪ, ನರಸಾಪುರ, ಯೆಂಬ ಹಳ್ಳಿಗಳಲ್ಲಿ ಬೇಡರು ಸಾಣೀ ಕಲ್ಲುಗಳನ್ನು ಮಾಡುತ್ತಾರೆ. ಬಾದಾಮಿಯ ನೆರೆಹೊರೆಯ ಗುಡ್ಡದಲ್ಲಿಯ ಉಸುಬಿನ ಕಲ್ಲಿನಿಂದ ಬೀಸುವ ಕಲ್ಲುಗಳನ್ನೂ ಘೋಣಿಗ

ಳನ್ನೂ ದೊಡ್ಡರು ಮಾಡಿ ದೂರ ದೂರ ಮಾರಾಟಕ್ಕೆ ವೊಯ್ಯುತ್ತಾರೆ. ಕಪ್ಪತ ಗುಡ್ಡದ ಕೆಲವು ಭಾಗಗಳಲ್ಲಿಯೂ ಬೀಸುವ ಕಲ್ಲುಗಳು ಹುಟ್ಟುತ್ತವೆ.

ಕಲಗಡಿಗೆ.—ಕಲಗಡಿಗೆಯ ಕಲ್ಲು ಕಪ್ಪತ ಗುಡ್ಡದಲ್ಲಿಯೂ ಧಾರವಾಡ ಜಿಲ್ಲೆಯ ಬೇರೆ ಗುಡ್ಡಗಳಲ್ಲಿಯೂ ದೊರಿಯುತ್ತದೆ. ದೋಸಿಗೇರೆಂಬ ಜಾತಿಯವರು ಉಳಿಗಳಿಂದ ಕೆತ್ತಿ ಕಲಗಡಿಗೆ, ಕಲಪರಟ, ಮುಂತಾದವುಗಳನ್ನು ಮಾಡಿ ದೂರ ದೂರ ಮಾರಾಟಕ್ಕೆ ವೊಯ್ಯುತ್ತಾರೆ. ಕಾನಡಾ ಜಿಲ್ಲೆಯಲ್ಲಿ ಕಾರವಾಡದ ಹತ್ತರ ಸೆಜವಾಡೆಂಬ ಹಳ್ಳಿಯಲ್ಲಿಯೂ ಕುಮಟೆಯ ಹತ್ತರ ಚಂದಾವರದಲ್ಲಿಯೂ ಕಲ್ಲಿನ ಪಾತ್ರೆಗಳು ಹುಟ್ಟುತ್ತವೆ.

ಬೆಲ್ಲ.—ಬೆಳಗಾವಿ ಧಾರವಾಡ ಜಿಲ್ಲೆಗಳ ಪಶ್ಚಿಮ ಭಾಗಗಳಲ್ಲಿಯೂ ಕಾನಡಾ ಜಿಲ್ಲೆಯಲ್ಲಿಯೂ ಬೆಲ್ಲವನ್ನು ಕಬ್ಬಿನ ರಸ ಕುದಿಸಿ ಮಾಡುವರು. ಹಾನಗಲ್ಲು ತಾಲೂಕಿನಲ್ಲಿ ಹುಟ್ಟುವ ಬೆಲ್ಲವು ಪ್ರಸಿದ್ಧವುಂಟು; ಅದು ದೂರ ವರೆಗೆ ಮಾರಾಟಕ್ಕೆ ಹೋಗುತ್ತದೆ. ಚಿಕ್ಕೋಡಿ ತಾಲೂಕಿನಲ್ಲಿ ಹುಕ್ಕೇರಿಯಲ್ಲಿ ಹಾನಗಲ್ಲಿನ ಬೆಲ್ಲಕ್ಕಿಂತ ಮೇಲಾದ ಬೆಲ್ಲ ಹುಟ್ಟುತ್ತದೆ. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಈಚಲ ರಸದಿಂದ ಬೆಲ್ಲವನ್ನು ಅಲ್ಪ ಸ್ವಲ್ಪ ಮಾಡುವರು. ಅದು ಕಬ್ಬಿನ ರಸದ ಬೆಲ್ಲಕ್ಕಿಂತ ಹೆಚ್ಚು ಸವಿ ಇರುತ್ತದೆಂದು ಹೇಳುತ್ತಾರೆ. ಹಾನಗಲ್ಲಿನಲ್ಲಿ ಕಡಿಮೇ ಜಾತಿಯ ಸಕ್ಕರೆಯು ಸ್ವಲ್ಪ ಮಾನದಿಂದ ಹುಟ್ಟುತ್ತದೆ.

ಬಣ್ಣದ ಫಲಗಳೂ ಚಿತ್ರಗಳೂ.—ಗೋಕಾವಿಯಲ್ಲಿ ಹುಟ್ಟುವ ಬಣ್ಣ ಕೊಟ್ಟ ಕಟ್ಟಿಗೆಯ ಫಲಗಳು ಬಹಳ ಪ್ರಸಿದ್ಧವುಂಟು. ೧೦ ಜೇನಗಾರರ ಮನೆಗಳಲ್ಲಿ ಈ ಫಲಗಳು ಹುಟ್ಟುತ್ತವೆ. ಈ ಫಲಗಳನ್ನು ಯುರೋಪಿಯನ್ನರು ಸಹ ಸ್ವದೇಶಕ್ಕೆ ವೊಯ್ಯುತ್ತಾರೆ. ಸಂಪಗಾವಿಯ ತಾಲೂಕಿಗೆ ಶೇರಿದ ದೇಶನೂರಲ್ಲಿ ಕಿಟ್ಟದ ಗೊಂಬೆಗಳು ಬಹು ಸರಸಾಗಿ ಹುಟ್ಟುತ್ತವೆ. ಅವಾದರೂ ದೂರ ದೂರ ಮಾರಾಟಕ್ಕೆ ಹೋಗುತ್ತವೆ. ಆದರೆ ಅವುಗಳನ್ನು ಮಾಡುವ ಜೇನಗಾರರ ಮನೆಗಳು ದೇಶನೂರಲ್ಲಿ ಮೂರಕ್ಕಿಂತ ಹೆಚ್ಚಿಲ್ಲ.

ಕಾಜಿನ ಬಳೆಗಳು.—ಇವು ಧಾರವಾಡ ಜಿಲ್ಲೆಯಲ್ಲಿ ಆಗುತ್ತವೆ. ಬೋಗಾರರೆಂಬ ಜೈನರು ಬಳ್ಳಾರಿಯಿಂದ ಕಾಜು ತಂದು ಅದರಿಂದ ಬಳೆಗಳನ್ನು ಮಾಡುತ್ತಾರೆ. ಕಾಜು ಕರಗಿಸುವ ಕುಲಿಮೆಯಲ್ಲಿ ನಾಲ್ಕು ಮೂಲೆಗೆ ನಾಲ್ಕು ಮುಶಿಗಳಿರುತ್ತವೆ. ಒಂದೊಂದು ಮುಶಿಯ ಹತ್ತರ ವೊಬ್ಬೊಬ್ಬ ಮನುಷ್ಯನು ಕೂತು, ಉದ್ದನ್ನ ಕಬ್ಬಿಣದ ಸಲಾಕಿಯ ತುದಿಗೆ ಮುಶಿಯೊಳಗಿನ ಕಾಜು ಸ್ವಲ್ಪ ಹಚ್ಚಿ ಕೊಂಡು ತೆಗಿದು, ವೊಂದು ಚೂರಿಯ ಸಹಾಯದಿಂದ ಆ ಕಾಜಿಗೆ ಉಂಗರದ ರೂಪ ಕೊಡುತ್ತಾನೆ. ಬಳಿಕ ಆ ಉಂಗರವನ್ನು ದುಂಡು ಶಂಕ್ವಾಕೃತಿಯಾದದ್ದೊಂದು ಕಬ್ಬಿಣದ ತುಂಡಿನ ಮೇಲೆ ಹಾಕಿ, ಹಿಡಿಕೆಯಿಂದ ಅದನ್ನು ತಿರಿಗಿಸುತ್ತ, ಬೇಕಾದಷ್ಟು ದೊಡ್ಡ ಬಳೆ ಮಾಡಿ, ಚೂರಿಯಿಂದ ಅದನ್ನು ತಿದ್ದುತ್ತಾನೆ. ಒಬ್ಬ ಮನುಷ್ಯನು ವೊಂದು ದಿನಕ್ಕೆ ಸುಮಾರು ವೊಂದು ಥಡೆ ಕಾಜಿನ ಬಳೆಗಳನ್ನು ಮಾಡುತ್ತಾನೆ; ಅವನಿಗೆ ತಿಂಗಳಿಗೆ ಸುಮಾರು ೮ ರುಪಾಯಿಯ ಆದಾಯವಾಗುತ್ತದೆ.

**ಚಂದನದ ಸಾಮಾನುಗಳು.**— ಇವು ಕಾನಡಾ ಜಿಲ್ಲೆಯ ಶಿರಸಿ, ಸಿದ್ದಾಪುರ, ಹೊನ್ನಾವರ, ಕುಮಟಾ, ಅಂಕೋಲೆ, ತಾಲೂಕುಗಳಲ್ಲಿ ಆಗುತ್ತವೆ. ಗುಡಿಗಾರರೆಂಬ ಜೀನಗಾರರು ಇವನ್ನು ಮಾಡುತ್ತಾರೆ. ಶ್ರೀಗಂಧದ ಪೆಟ್ಟಿಗೆ, ಕಲಮದಾನಿ, ಸಣ್ಣ ಕಪಾಟುಗಳು, ಚದರಂಗದ ಮನೆಗಳು, ಕಾರ್ಡಕೇಸ, ಕಾಗದ ಕೊಯ್ಯುವ ಚೂರಿ, ಮುಂತಾದ ಪದಾರ್ಥಗಳನ್ನು ಬಹು ಸೂಕ್ಷ್ಮವಾದ ಚಿತ್ರಗಳನ್ನು ಕೊರಿದು ಅತ್ಯುತ್ತಮವಾಗಿ ಮಾಡುತ್ತಾರೆ. ಶ್ರೀಗಂಧವಲ್ಲದೆ ಆನೆಯ ಹಲ್ಲು, ಎಬನಿ ಯೆಂಬ ಕರೆಕಟ್ಟಿಗೆ, ಇವುಗಳ ಪದಾರ್ಥಗಳನ್ನಾದರೂ ಗುಡಿಗಾರರು ಗಾಡದ ಮೇಲೆಯೂ ಬೇರೆ ಬಗೆಯಾಗಿಯೂ ಬಹು ಸರಸಾಗಿ ಮಾಡುತ್ತಾರೆ. ಈ ಸಾಮಾನುಗಳು ಯುರೋಪ ಖಂಡಕ್ಕೆ ಬಹಳ ಹೋಗುತ್ತವೆ. ಸನ್ ೧೮೬೭ರಲ್ಲಿ ಪಾರಿಸ ಪಟ್ಟಣದಲ್ಲಿ ಆದ ಪ್ರದರ್ಶನದಲ್ಲಿ ಹೊನ್ನಾವರದ ಸುಬ್ಬಣ್ಣನೆಂಬ ಗುಡಿಗಾರನು ಮಾಡಿದ ಶ್ರೀಗಂಧದ ಪದಾರ್ಥಗಳು ಮಾನ್ಯವಾಗಿ ಸುಬ್ಬಣ್ಣನಿಗೆ ಇನಾಮು ದೊರೀತು. ಆದರೆ ದೇಶೀ ಜನರೊಳಗೆ ಈ ಪದಾರ್ಥಗಳ ಮಾರಾಟವಾಗುವದಿಲ್ಲ.

**ಕೋಡಿನ ಚಿತ್ರಗಳು.**— ಇವಾದರೂ ಕಾನಡಾ ಜಿಲ್ಲೆಯಲ್ಲಿ ಕುಮಟಾ, ಹೊನ್ನಾವರ, ಬೀಳಗಿ, ಶಿರಸಿ, ಮುಂತಾದ ಕಡೆಯಲ್ಲಿ ಆಗುತ್ತವೆ. ಚಿಗರೆ, ಕಾಡುಕೋಣ, ಮುಂತಾದ ಪಶುಗಳ ಕೋಡಿನಿಂದ ಅಭಿಷೇಕ ಪಾತ್ರೆ, ಸರ್ಪಣಿ, ನಾಯಿ, ನರಿ, ಆಕಳು, ಮುಂತಾದ ಪಶುಗಳ ಆಕೃತಿಗಳು, ಇವೇ ಮೊದಲಾದ ಪದಾರ್ಥಗಳನ್ನು ಗುಡಿಗಾರರೂ ಬಡಿಗಿಗಳೂ ಬಹು ಸುಂದರವಾಗಿ ಮಾಡುತ್ತಾರೆ. ಇವುಗಳ ಮಾರಾಟವು ಮುಖ್ಯವಾಗಿ ಯುರೋಪಿಯನ್ ಜನರೊಳಗೆ ಮಾತ್ರ ಆಗುತ್ತದೆ.

**ಬೆತ್ತದ ಹೆಣಿಕೆಯ ಪದಾರ್ಥಗಳು.**— ಇವನ್ನು ಕಾರವಾಡದಲ್ಲಿ ಚೀನೀ ಕೈದಿಗಳು ಮಾಡುತ್ತಾರೆ. ಬೆತ್ತದ ಪೆಟ್ಟಿಗೆಗಳು, ಖುರ್ಚಿಗಳು, ಹೂವಿನ ಬುಟ್ಟಿಗಳು, ಮುಂತಾದ ಪದಾರ್ಥಗಳು ಸರಸಾಗಿ ಆಗುತ್ತವೆ.

**ಕಾಚು.**— ಕಾನಡಾ ಜಿಲ್ಲೆಯ ಸಮುದ್ರತೀರದ ಗ್ರಾಮಗಳಲ್ಲಿ ಕೈರೀ ಮರದ ಕಟ್ಟಿಗೆಯೊಳಗಿನ ಗಂಡು ಕುದಿಸಿ ಕರೆ ಕಾಚು ಮಾಡುತ್ತಾರೆ. ಈ ಹೋರೆಯನ್ನು ಸರಕಾರದವರು ಪೂರ್ವದಲ್ಲಿ ನಿಲ್ಲಿಸಿದ್ದರು. ಆದರೆ ಸನ್ ೧೮೮೦ರಿಂದ ಗುತ್ತಿಗೆಯಿಂದ ಕಾಚು ಮಾಡುವ ಕೆಲಸವು ಹೊನ್ನಾವರ ಮುಂತಾದ ಕಡೆಯಲ್ಲಿ ನಡಿದಿರುತ್ತದೆ. ಸನ್ ೧೮೮೦ರಲ್ಲಿ ಸರಕಾರಕ್ಕೆ ಕಾಚಿನ ಕಾರಖಾನೆಯಿಂದ ೩೬೪೦ ರೂಪಾಯಿ ಆದಾಯವಾಯಿತು.

**ಹುಲ್ಲಿನ ಚಾಪೆಗಳು.**— ಇವನ್ನು ಕಾನಡಾ ಜಿಲ್ಲೆಯ ಕೊರವರು ಮಿದುವಾದ ಹುಲ್ಲಿನಿಂದ ಮಾಡುತ್ತಾರೆ. ೫ ಮೊಳ ಅಗಲು, ೮, ೯ ಮೊಳ ಉದ್ದ, ಇಂಥಾ ಚಾಪೆಗೆ ಸುಮಾರು ೧೪ ಆಣೆಯಿಂದ ೧ ರೂಪಾಯಿ ೪ ಆಣೆಯ ವರೆಗೆ ಬೆಲೆ ಬೀಳುತ್ತದೆ. ಈ ಚಾಪೆಗಳು ಹತ್ತೆಂಟು ವರ್ಷ ತಾಳುತ್ತವೆ.